بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 42

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

19 ಅಕ್ಟೋಬರ್ 2023, 19 ಅಖಾ 1402 ಹಿಜರಿ ಶಮ್ಸಿ,
03 ರಬೀಉಲ್ ಆಖರ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَبِالْحَقِّ اَنْزَلْنٰهُ وَبِالْحَقِّ نَزَلَ
وَمَاۤ اَرْسَلْنٰكَ اِلَّا مُبَشِّرًا وَّنَذِيْرًا

(ಸೂರಃ ಬನೀಇಸ್ರಾಈಲ್: 106)

**ಅಂದರೆ: ಸತ್ಯದೊಂದಿಗೆ ನಾವು ಅದನ್ನು ಅವತೀರ್ಣಗೊಳಿಸಿದ್ದೇವೆ. ಸತ್ಯದೊಂದಿಗೆ ಅದು ಇಳಿದಿದೆ. ಶುಭವಾರ್ತೆಯನ್ನು ತಿಳಿಸುವವನಾಗಿ ಮತ್ತು ಮುನ್ನೆಚ್ಚರಿಕೆಯನ್ನು ನೀಡುವವನಾಗಿ ನಾವು ನಿನ್ನನ್ನು ನಿಯೋಜಿಸಿದ್ದೇವೆ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಸುಳ್ಳು ಸಾಕ್ಷಿಯ ಮೂಲಕ ಇನ್ನೊಬ್ಬರ ಆಸ್ತಿಯನ್ನು ಪಡೆದುಕೊಳ್ಳುವ ವ್ಯಕ್ತಿಯು ಅಲ್ಲಾಹನನ್ನು ಎಂತಹ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ ಅಂದರೆ ಅಲ್ಲಾಹನು ಆತನಿಂದ ಬೇಸರಗೊಂಡಿರುವನು**

**(2416-17)** ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು: “ಯಾರು ಪ್ರಮಾಣ ವಚನ ಸ್ವೀಕರಿಸುತ್ತಾರೋ ಅವರು ಅದರಲ್ಲಿ ಸುಳ್ಳುಗನಾಗಿದ್ದರೆ, ಮತ್ತು ಇದರ ಮೂಲಕ ( ಪ್ರಮಾಣ) ಓರ್ವ ಮುಸಲ್ಮಾನನ ಆಸ್ತಿಯು ಪಡೆದುಕೊಂಡರೆ. ಆತನು ಅಲ್ಲಾಹನನ್ನು ಆತನ ಮೇಲೆ ಕೋಪಗೊಂಡಿದುವ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ. ಹಝ್ರತ್ ಅಶ್‌ಅಸ್(ರ) ಹೇಳುತ್ತಿದ್ದರು: ಅಲ್ಲಹನ ಆಣೆ!! ಈ ಮಾತನ್ನು ಹಝ್ರತ್ ಪೈಗಂಬರ್(ಸ) ರವರು ನನ್ನ ಬಗ್ಗೆಯೇ ಹೇಳಿರುವರು. (ಘಟನೆ ಹೀಗಿತ್ತು) ನನ್ನ ಮತ್ತು ಓರ್ವ ಯಹೂದಿಯ ಒಂದು ಭೂಮಿ ಇತ್ತು ಆತನು (ಯಹೂದಿ) ನನ್ನನ್ನು ಆ ಭೂಮಿಯಲ್ಲಿ ಹಕ್ಕಿಲ್ಲ ಎಂದು ನಿರಾಕರಿಸಿದನು. ಆದ್ದರಿಂದ ನಾನು ಹಝ್ರತ್ ಪೈಗಂಬರ್(ಸ) ರವರ ಬಳಿ ಹೋದಾರ ರಸೂಲುಲ್ಲಾಹ್(ಸ) ರವರು ನನಗೆ ಕೇಳಿದರು: ನಿಮ್ಮ ಬಳಿ ಏನಾದರೂ ಪುರಾವೆಗಳಿವೆಯೇ? ಅದಕ್ಕೆ ನಾನು ಹೇಳಿದೆ: ಇಲ್ಲ (ಹಝ್ರತ್ ಅಶ್‌ಅಸ್) ಹೇಳುತ್ತಿದ್ದರು: ನೀವು(ಸ) ಆ ಯಹೂದಿಗೆ ಪ್ರಮಾಣ ಮಾಡಿ ಹೇಳಲು ಹೇಳಿದರು. ಅದಕ್ಕೆ (ಹಝ್ರತ್ ಅಶ್‌ಅಸ್) ಹೇಳುತ್ತಾರೆ: ಯಾ ರಸೂಲಲ್ಲಾಹ್! ಅವನು ಪ್ರಮಾಣ ಮಾಡುತ್ತಾನೆ ಮತ್ತು ನನ್ನ ಸಂಪತ್ತು ಹೋಗುತ್ತದೆ, ಆಗ ಸರ್ವಶಕ್ತನಾದ ಅಲ್ಲಾಹನು ಈ ವಚನವನ್ನು ಅವತರಿಸಿದನು: ಅಲ್ಲಾಹನ ಒಪ್ಪಂದ ಮತ್ತು ಅವರ ಪ್ರಮಾಣಗಳಿಗೆ ಪ್ರತಿಯಾಗಿ ಸಣ್ಣ ಮೊತ್ತವನ್ನು ತೆಗೆದುಕೊಳ್ಳುವವರು. **(ಸಹೀಹ್ ಬುಖಾರಿ, ಸಂಪುಟ 4, ಕಿತಾಬ್ ಅಲ್-ಖುಸುಮಾತ್, 2008 ಖಾದಿಯಾನ್ ಪ್ರಕಟಿತ)**

ನಿಜವಾದ ಲಾಭವು ಸರ್ವಶಕ್ತನಾದ ಅಲ್ಲಾಹನ ಅಸ್ತಿತ್ವವೇ ಆಗಿದೆ, ಆದ್ದರಿಂದ ಒಬ್ಬ ವ್ಯಕ್ತಿಯು ಅಪರಿಚಿತರ ಬಾಗಿಲಲ್ಲಿ ತನ್ನ ಮೂಗು ಉಜ್ಜುವುದು ಎಷ್ಟು ಅನೈತಿಕವಾಗಿದೆ.

ಧರ್ಮನಿಷ್ಠರಿಗೆ, ಅಲ್ಲಾಹನು ಎಲ್ಲಾ ರೀತಿಯಲ್ಲೂ ಮಾರ್ಗದರ್ಶಿಯಾಗಿರುತ್ತಾನೆ. ಯಾರಿಗೂ ತಿಳಿಯದಂತಹ ಸ್ಥಳದಿಂದ ಅವನು ಜೀವನಾಂಶವನ್ನು ಪಡೆಯುತ್ತಾನೆ.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ನಿಜವಾದ ಲಾಭ ಸರ್ವಶಕ್ತನಾದ ಅಲ್ಲಾಹನ ಅಸ್ತಿತ್ವವೇ ಆಗಿದೆ

ಜಗತ್ತಿನಲ್ಲಿ ಜನರು ಅಧಿಕಾರಿಗ ಅಥವಾ ಇತರ ಜನರ ಕೆಲವು ರೀತಿಯ ಪ್ರಯೋಜನವನ್ನು ಪಡೆಯುವ ಕಾಲ್ಪನಿಕ ಭರವಸೆಯ ಮೇಲೆ ಅವರನ್ನು ಮೆಚ್ಚಿಸಲು ವಿವಿಧ ರೀತಿಯಲ್ಲಿ ಮುಖಸ್ತುತಿ ಮಾಡುತ್ತಾರೆ. ಕೆಲವೊಮ್ಮೆ ಕೆಳಹಂತದ ಅಧಿಕಾರಿಗಳನ್ನು ಮತ್ತು ಸೇವಕರನ್ನು ಸಹ ಸಂತೋಷಪಡಿಸಬೇಕಾಗುತ್ತದೆ. ಹೇಗಾದರೂ, ಆ ಆಡಳಿತಗಾರನು ಸಂತೋಷಪಟ್ಟರೂ ಸಂತೋಷವಾಗಿದ್ದರೂ ಸಹ, ಅದು ಕೆಲವು ದಿನಗಳವರೆಗೆ ಅಥವಾ ನಿರ್ದಿಷ್ಟ ಸಂದರ್ಭದಲ್ಲಿ ಮಾತ್ರ ಪ್ರಯೋಜನಗಳನ್ನು ತರುತ್ತದೆ ಎಂದು ನಿರೀಕ್ಷಿಸಬಹುದು. ಈ ಕಾಲ್ಪನಿಕ ಭರವಸೆಯ ಮೇಲೆ, ಮನುಷ್ಯನು ಅವರ ಸೇವಕರನ್ನು ಹೇಗೆ ಹೊಗಳುತ್ತಾನೆ ಎಂದರೆ ನಾನು ಅಂತಹ ಮುಖಸ್ತುತಿಗಳ ಆಲೋಚನೆಗಳಿಂದಲ್ಲೂ ನಡುಗುತ್ತೇನೆ. ಹೇಗೆ ಒಬ್ಬ ಮೂರ್ಖ ಮನುಷ್ಯ ತನ್ನಂತಹ ಮನುಷ್ಯನನ್ನು ಭ್ರಮೆಯ ಮತ್ತು ಕಾಲ್ಪನಿಕ ಭರವಸೆಯ ಮೇಲೆ ಹೊಗಳುತ್ತಾನೆ ಎಂದು ನನ್ನ ಹೃದಯವು ದುಃಖದಿಂದ ತುಂಬಿಕೊಳುತ್ತದೆ. ಆದರೆ ಯಾವುದೇ ಪರಿಹಾರ ಅಥವಾ ವಿಜ್ಞಾಪನೆ ಇಲ್ಲದೆ ತನಗೆ ಅನಂತ ಉಪಕಾರವನ್ನು ನೀಡಿದ ನಿಜವಾದ ದಾನಿಯು ಯಾವುದೇ ರೀತಿಯ ಕಾಳಜಿ ವಹಿಸುವುದಿಲ್ಲ; ಆದಾಗ್ಯೂ, ಆ ವ್ಯಕ್ತಿಯು ಆತನಿಗೆ ಪ್ರಯೋಜನ ನೀಡಬೇಕಾದರೂ ಏನು ನೀಡಬಲ್ಲನು? ನಾನು ಸತ್ಯವಾಗಿ ಹೇಳುತ್ತೇನೆ ಯಾವುದೇ ಲಾಭವು ಸರ್ವಶಕ್ತನಾದ ಅಲ್ಲಾಹನನ್ನು ಹೊರತುಪಡಿಸಿ ತಲುಪುವುದಿಲ್ಲ. ಅವನು ಪ್ರಯೋಜನವನ್ನು ಪಡೆಯುವ ಮೊದಲು, ಲಾಭ ನೀಡುವವನು ಅಥವಾ ಅವನೇ ಇಹಲೋಕವನ್ನು ತ್ಯಜಿಸಬಹುದು ಅಥವಾ ಅವನಿಂದ ಯಾವುದೇ ಅದೃಷ್ಟ ಮತ್ತು ವೈಯಕ್ತಿಕ ಪ್ರಯೋಜನವನ್ನು ತೆಗೆದುಕೊಳ್ಳಲಾಗದ ಕೆಲವು ಅಪಾಯಕಾರಿ ಕಾಯಿಲೆಯಿಂದ ಅನಾರೋಗ್ಯಕ್ಕೆ ಒಳಗಾಗುವ ಸಾಧ್ಯತೆಯಿದೆ. ಆದ್ದರಿಂದ, ನಿಜವಾದ ವಿಷಯವೆಂದರೆ ಸರ್ವಶಕ್ತನಾದ ಅಲ್ಲಾಹನ ಅನುಗ್ರಹ ಮತ್ತು ಕರುಣೆಯು ಮಾನವ ಸ್ಥಿತಿಯಲ್ಲಿ ಸೇರದ ಹೊರತು, ಮನುಷ್ಯನು ಯಾರಿಂದಲೂ ಯಾವುದೇ ಪ್ರಯೋಜನವನ್ನು ಪಡೆಯಲು ಸಾಧ್ಯವಿಲ್ಲ. ಆಗ, ನಿಜವಾದ ಹಿತಚಿಂತಕನು ಸರ್ವಶಕ್ತನಾದ ಅಲ್ಲಾಹನಾಗಿರುವಾಗ, ಜನರು ಇತರರ ಬಾಗಿಲಿಗೆ ತಮ್ಮ ಮೂಗು ಉಜ್ಜುವುದು ಎಷ್ಟು ಅನೈತಿಕವಾಗಿದೆ. ಓರ್ವ ದೇವರ ಭಯಭಕ್ತಿವುಳ್ಳ ಮುಮಿನ್‌ನ ಆತ್ಮಗೌರವವು ತನ್ನ ಹಕ್ಕಲ್ಲದ ತನ್ನಂತಹ ವ್ಯಕ್ತಿಯನ್ನು ಹೊಗಳುವ ಅಗತ್ಯವಿರುವುದಿಲ್ಲ. ಧರ್ಮನಿಷ್ಠರಿಗೆ, ಅಲ್ಲಾಹನು ಎಲ್ಲಾ ರೀತಿಯ ಮಾರ್ಗವನ್ನು ಮಾರ್ಗದರ್ಶಿಸುತ್ತಾನೆ. ಯಾರಿಗೂ ತಿಳಿಯದಂತಹ ಸ್ಥಳದಿಂದ ಅವನು ಜೀವನಾಂಶವನ್ನು ಪಡೆಯುತ್ತಾನೆ. ಅಲ್ಲಾಹನು ಸ್ವತಃ ಅವನ ರಕ್ಷಕ ಮತ್ತು ಮಾರ್ಗದರ್ಶಕನಾಗುತ್ತಾನೆ. ಲೌಕಿಕತೆಯ ಮೇಲೆ ಧರ್ಮಕ್ಕೆ ಆದ್ಯತೆ ನೀಡುವ ಅಲ್ಲಾಹನ ದಾಸರು, ಅವರೊಂದಿಗೆ ಅಲ್ಲಾಹನ ಪ್ರೀತಿ ಮತ್ತು ವಾತ್ಸಲ್ಯವಿದೆ, ಆದ್ದರಿಂದ, ಅಲ್ಲಾಹನು ಸ್ವತಃ ಹೇಳುತ್ತಾನೆ: **ವಲ್ಲಾಹು ರೂಫುನ್ ಬಿಲ್ ಇಬಾದ್** ಅಂದರೆ ಅಲ್ಲಾಹನು ತನ್ನ ಸೇವಕರ ಮೇಲೆ ಕರುಣಾಮಯಿಯಾಗಿದ್ದಾನೆ. (ಅಲ್-ಬಖರಾ: 208).

**(ಮಲ್‌ಫೂಝಾತ್, ಸಂಪುಟ-1, ಪುಟ-493, ಪ್ರಕಟಿತ 2018 ಖಾದಿಯಾನ್)**

### *128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

**"ಮುಜ್‌ಕೋ ಕಾಫಿರ್ ಕಹ್‌ಕೆ ಅಪ್ನೆ ಕುಫ್ರ್ ಪರ್ ಕರ್ತೆ ಹೈಂ ಮುಹರ್ ಎ ತೋ ಹೈ ಸಬ್ ಶಕಲ್ ಉನ್‌ಕೀ ಹಮ್ ತೋ ಹೈಂ ಆಯಿನಾದಾರ್॥"**

ಅನುವಾದ: ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದು ಘೋಷಿಸಿ ಸ್ವಯಂ ತನ್ನ ಅವಿಶ್ವಾಸವನ್ನು ದೃಡೀಕರಿಸುತ್ತಿದ್ದಾರೆ. ಇವೆಲ್ಲವು ಅವರ ಕಾರಸ್ತಾನವಾಗಿದೆ, ನವು ಕನ್ನಡಿಯಾಗಿದ್ದೇವೆ ಅಷ್ಟೇ.

**(ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))................(8)**

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮೇಲೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆ ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ.

ಕಳೆದ ಏಳು ಸಂಚಿಕೆಗಳಿಂದ, ನಾವು ಅಹ್ಮದೀಯ ಜಮಾಅತ್‌ನ ಸಂಸ್ಥಾಪಕ, ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಅವರ ಬಗ್ಗೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆಯ ಆಕ್ಷೇಪಣೆಗಳಿಗೆ ಪ್ರತಿಕ್ರಿಯಿಸುತ್ತಿದ್ದೇವೆ. ಆಕ್ಷೇಪಣೆಗಳ ವಿವರಗಳು ಮತ್ತು ಅವುಗಳ ಹಿನ್ನೆಲೆಯನ್ನು ಆಗಸ್ಟ್ 17 ರ ಸಂಚಿಕೆಯಲ್ಲಿ ನೋಡಬಹುದು. ಮುನ್ಸಿಫ್ ನ ಆಕ್ಷೇಪಣೆಗಳಲ್ಲಿ ಒಂದು ಹೀಗಿದೆ:

"ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅವರು ಮುಜದ್ದಿದ್, ಮುಹದ್ದಿಸಿಯ್ಯತ್ (ಆವಿಷಕಾರಕ), ಮಹದಿವಿಯ್ಯತ್, ಮಸೀಹಿಯ್ಯತ್, ಝಿಲ್ಲಿ ನಬೀ, ಬರೂಝಿ ನಬೀ, ಹಖೀಖಿ ನಬೀ, ಝಿಲ್ ಮುಹಮ್ಮದ್(ಸ) ಮತ್ತು ಭಗವಂತ ಆಗಿರುವ ಬಗ್ಗೆ ವಾದವನ್ನು ಮಮಡಿದ್ದಾರೆ. ಅದೇನೇ ಇದ್ದರೂ, ಅದನ್ನು ಅನುಸರಿಸುವವರು ತಮ್ಮನ್ನು ಅಹ್ಮದಿ ಮುಸ್ಲಿಮರು ಎಂದು ಕರೆದುಕೊಳ್ಳಲು ಇಷ್ಟಪಡುತ್ತಾರೆ ಮತ್ತು ಇತರೆ ಮುಸ್ಲಿಮರು ಅವರನ್ನು ಹೀಗೆಯೇ ಯೋಚಿಸಬೇಕು ಎಂದು ಭಾವಿಸುತ್ತಾರೆ."

ಕಳೆದ ಎರಡು ಸಂಚಿಕೆಗಳಲ್ಲಿ, ನಾವು ಮುಜದ್ದಿದ್, ಮಹದ್ದಿಸ್, ಮಹದಿ, ಮಸ್ಲಿಯತೆ ಮಸೀಹ್, ಮಸೀಹಿಯ್ಯತ್, ಎಂಬ ಆಕ್ಷೇಪಣೆಗೆ ಉತ್ತರಿಸಿದ್ದೇವೆ. ಈಗ ನಾವು ಹಖೀಖಿ ನಬಿ (ನಿಜವಾದ ಪ್ರವಾದಿ) ಯ ಆಕ್ಷೇಪಣೆಗೆ ಉತ್ತರಿಸುತ್ತೇವೆ. 'ಮುನ್ಸಿಫ್'ರ ಮೇಲೆ ಉಲ್ಲೇಖಿಸಲಾದ ಆಕ್ಷೇಪಣೆಯು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತನ್ನನ್ನು ನಿಜವಾದ ಪ್ರವಾದಿ ಎಂದು ಕರೆದಿದ್ದಾರೆ ಎಂದು ತೋರಿಸುತ್ತದೆ. ಇದು ಸಂಪೂರ್ಣ ಸುಳ್ಳು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಯಾವಾಗ ಮತ್ತು ಎಲ್ಲಿ ತನ್ನನ್ನು ನಿಜವಾದ ಪ್ರವಾದಿ ಎಂದು ಘೋಷಿಸಿಕೊಂಡಿದ್ದಾರೆ? ಎಂಬುದನ್ನು ನಮಗೆ ತೋರಿಸುವುದು 'ಮುನ್ಸಿಫ್' ಪತ್ರಿಕೆಯ ಸಂಪಾದಕರ ಕರ್ತವ್ಯವಾಗಿದೆ. ಸಯ್ಯಿದುನಾ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ವಾಗ್ದತ್ತ ಮಹದಿ ಅಲೈಹಿಸ್ಸಲಾಮ್ ಅವರು ಅವರ ಯಾವುದೇ ಬರಹಗಳಲ್ಲಿ ತನ್ನನ್ನು ತಾನು ನಿಜವಾದ ಪ್ರವಾದಿ ಎಂದು ಘೋಷಿಸಿಕೊಂಡಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮನ್ನು ಝಿಲ್ಲಿ ಮತ್ತು ಬರೂಝಿ ನಬೀ ಎಂದು ಘೋಷಿಸಿದ್ದಾರೆ ಅದರರ್ಥ ಹಝ್ರತ್ ಮಸೀಹ್ ಮೌಊದ್(ಅ) ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ 'ಝಿಲ್' ಸದೃಶರೂಪವಾಗಿದ್ದರು ಮತ್ತು ಅವರು(ಅ) ಏನೇನೆಲ್ಲ ಪಡೆದಿದ್ದಾರೊ ಅದು ಹಝ್ರತ್ ಪೈಗಂಬರ್(ಸ) ಅವರ ಅನುಸರಣೆಯ ಪ್ರತಿಫಲವಾಗಿ ಪಡೆದಿದ್ದಾರೆ. ಮತ್ತೊಂದೆಡೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಯ ನಿಜವಾದ ಪ್ರವಾದಿತ್ವ ಎಂಬ ಪಾರಿಭಾಷಿಕ ಪದವನ್ನು ಬಳಸುತ್ತಿದ್ದರು, ಇದರರ್ಥ ಅವರು ಷರ್‌ಈ ನಬೀ ಎಂದು ತೆಗೆದುಕೊಳ್ಳುತ್ತಿದ್ದರು ಅಥವಾ ಷರ್‌ಈ ನಬೀಯನ್ನು ಅನುಸರಿಸದೆ ನೇರವಾಗಿ ಸರ್ವಶಕ್ತನಾದ ಅಲ್ಲಾಹನು ನೀಡಿದ ಪ್ರವಾದಿತ್ವ ಎಂದು ತೆಗೆದುಕೊಂಡರು. ಹೀಗಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತನ್ನ ಪ್ರವಾದಿತ್ವವನ್ನು ಅಂಗೀಕರಿಸಿದ್ದಾರೆ ಮತ್ತು ಘೋಷಿಸಿದ್ದಾರೆ ಅದು ಝಿಲ್ಲಿ ಮತ್ತು ಬುರೂಝಿ ನಬುವ್ವತ್ ಮತ್ತು ಉಮ್ಮತಿ ನಬುವ್ವತ್ ಆಗಿದೆ. ಮತ್ತು ಅವರು ಯಾವಾಗಲೂ (ಹಖೀಖಿ ನಬುವ್ವತ್) ನಿಜವಾದ ಪ್ರವಾದಿತ್ವವನ್ನು ನಿರಾಕರಿಸಿದ್ದಾರೆ. ಈ ನಿಟ್ಟಿನಲ್ಲಿ, ಅವರ(ಅ) ಸ್ವಂತ ಬರಹಗಳನ್ನು ನಾವು ಕೆಳಗೆ ಪ್ರಸ್ತುತಪಡಿಸುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

**"ಮನ್ ಖಾಲ ಬಅ್‌ದ ರಸೂಲಿನಾ ವ ಸಯ್ಯಿದಿನಾ ಇನ್ನೀ ನಬೀಯ್ಯುನ್ ಔ ರಸೂಲುನ್ ಅಲಾ ವಜ್‌ಹಿಲ್ ಹಖೀಖತಿ ವಲ್‌ಇಫ್ತಿರಾಇ ವತರ್‌ಕಿಲ್‌ಖುರಾನಿ ವಹ್‌ಕಾಮಿಶ್ಶರೀಅತಿಲ್ ಗ್ಗರ್ರಾಇ ಫಹುವಾ ಕಾಫಿರುನ್ ಕಝ್ಝಾಬುನ್–** ನಿಜವಾಗಿ ಪ್ರವಾದಿತ್ವವನ್ನು ಪ್ರತಿಪಾದಿಸುವ ವ್ಯಕ್ತಿಯು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಅನುಗ್ರಹಗಳಿಂದ ತನ್ನನ್ನು ಪ್ರತ್ಯೇಕಿಸಿ ಮತ್ತು ಆ ಪವಿತ್ರ ಮೂಲದಿಂದ ತನ್ನನ್ನು ಪ್ರತ್ಯೇಕಿಸಿ ನೇರವಾಗಿ ಅಲ್ಲಾಹನ ಪ್ರವಾದಿಯಾಗಲು ಬಯಸುವ ವ್ಯಕ್ತಿಯು ಸುಳ್ಳುಗಾರ ಮತ್ತು ನಾಸ್ತಿತನಾಗಿದ್ದಾನೆ ಎಂಬುದು ನಮ್ಮ ನಿಲುವಾಗಿದೆ. (ಅಂಜಾಮ್ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ 27, 28 ಅಡಿಟಿಪ್ಪಣಿ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಮತ್ತು ಅಲ್ಲಾಹನ ಆಣೆ! ಕೊನೆಯ ಕಾಲದಲ್ಲಿ ಮತ್ತು ಅಂಧಾಕಾರವು ಹರಡಿರುವ ದಿನಗಳಲ್ಲಿ ಆಗಮನದ ಕುರಿತು ವಾಗ್ದಾನ ಮಾಡಲಾದ ವಾಗ್ದತ್ತ ಮಸೀಹ್ ನಾನೇ ಆಗಿದ್ದೇನೆ ಮತ್ತು ಖಂಡಿತವಾಗಿಯೂ ಈಸಾಮಸೀಹರು ಮರಣ ಹೊಂದಿದ್ದಾರೆ ಮತ್ತು ತಸ್ಲೀಸಿ (ತೃತ್ವವಾದಿ) ಮಝ್‌ಹಬ್ (ಕ್ರೈಸ್ತ ಧರ್ಮವು) ಅಮಾನ್ಯವಾಗಿದೆ ..... ಮತ್ತು ನಮ್ಮ ಪ್ರವಾದಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ನಂತರ ಪ್ರವಾದಿತ್ವದ ಸರಪಳಿಯು ಮುರಿದುಹೋಯಿತು. ಫುರ್ಖಾನೆ ಹಮೀದ್ (ಪವಿತ್ರ ಖುರ್‌ಆನ್) ನಂತರ ಬೇರೆ ಯಾವುದೇ ಧರ್ಮಗ್ರಂಥವಿಲ್ಲ, ಇದು ಹಿಂದಿನ ಎಲ್ಲಾ ಗ್ರಂಥಗಳಿಗಿಂತ ಉತ್ತಮವಾಗಿದೆ ಅಥವಾ ಮುಹಮ್ಮದಿಯಾ ಷರಿಯಾ (ಕಾನೂನು) ನಂತರ ಯಾವುದೇ ಕಾನೂನು ಇಲ್ಲ. ಆದಾಗ್ಯೂ, ಖೈರುಲ್–ಬರಿಯಾ (ಸೃಷ್ಟಿಗಳಲ್ಲಿ ಶ್ರೇಷ್ಟರು) ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಅನುಗ್ರಹದಾಯಕ ನಾಲಿಗೆಯಿಂದ ನಾನು ಪ್ರವಾದಿ ಎಂದು ಹೆಸರಿಸಲ್ಪಟ್ಟಿದ್ದೇನೆ ಮತ್ತು ಇದು ಅವರ ಪರಿಪೂರ್ಣ ಅನುಸರಣೆಯ ಅನುಗ್ರಹದಿಂದಾಗಿ ಒಂದು ಸದೃಶರೂಪವಾಗಿದೆ. ಮತ್ತು ನಾನು ನನ್ನಲ್ಲಿ ಯಾವುದೇ ಸದ್ಗುಣವನ್ನು ಕಾಣುವುದಿಲ್ಲ ಮತ್ತು ನಾನು ಕಂಡುಕೊಂಡದ್ದನ್ನು ಈ ಪರಿಶುದ್ಧ ಆತ್ಮದಿಂದ ನಾನು ಕಂಡುಕೊಂಡೆ. ನನ್ನ ಪ್ರವಾದಿತ್ವದಿಂದ ಅಲ್ಲಾಹನ ಮೂಲ ಉದ್ದೇಶ ಕೇವಲ ಸರ್ವಶಕ್ತನಾದ ಅಲ್ಲಾಹನ ಸಂಭಾಷಣೆಯಾಗಿದೆ. ಮತ್ತು ಅದಕ್ಕಿಂತ ಹೆಚ್ಚಿನ ಉದ್ದೇಶವನ್ನು ಹೊಂದಿರುವವನ ಮೇಲೆ ಅಲ್ಲಾಹನ ಶಾಪವು ಇರಲಿ. ಅಥವಾ ಅವನು ತನ್ನನ್ನು ತಾನು ಒಂದು ವಸ್ತು ಎಂದು ಪರಿಗಣಿಸುತ್ತಾನೆ ಅಥವಾ ಹುಝೂರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಗುಲಾಮಗಿರಿಯಿಂದ ತನ್ನನ್ನು ಪ್ರತ್ಯೇಕಿಸುತ್ತಾನೆ ಮತ್ತು ಖಂಡಿತವಾಗಿಯೂ ನಮ್ಮ ಸಂದೇಶವಾಹಕರು ಖಾತಮನ್ನಬೀಈನ್ (ಪ್ರವಾದಿಗಳ ಮುದ್ರೆ) ಆಗಿದ್ದಾರೆ. ಅವರ ಮೇಲೆ ಸಂದೇಶವಾಹಕರ ಸರಪಳಿಯು ಮುಕ್ತಾಯಗೊಂಡಿದೆ. ಆದ್ದರಿಂದ, ನಮ್ಮ ಪವಿತ್ರ ಪ್ರವಾದಿ (ಸ) ಅವರ ನಂತರ ಶಾಶ್ವತ ಪ್ರವಾದಿತ್ವವನ್ನು ಪಡೆಯಲು ಯಾರಿಗೂ ಹಕ್ಕಿಲ್ಲ ಮತ್ತು ಅವರ ನಂತರ ಆಗಾಗ್ಗೆ ಸಂಭಾಷಣೆಯನ್ನು ಹೊರತುಪಡಿಸಿ ಏನೂ ಉಳಿದಿಲ್ಲ ಮತ್ತು ಅದು ಕೂಡ ಖೈರುಲ್–ಬರಿಯಾವನ್ನು ಅನುಸರಿಸುವ ಷರತ್ತಿನೊಂದಿಗೆ. ಮತ್ತು ಅಲ್ಲಾಹನ ಆಣೆ, ಮುಸ್ತಫಾ ರಾಯರ ಬೆಳಕನ್ನು ಅನುಸರಿಸುವ ಮೂಲಕ ನಾನು ಈ ಸ್ಥಾನಮಾನವನ್ನು ಪಡೆದಿದ್ದೇನೆ.

ಮತ್ತು ನನಗೆ ಅಲ್ಲಾಹನಿಂದ ಅಕ್ಷರಶಃ ಅಲ್ಲ ಬದಲಿಗೆ ಸಾಂಕೇತಿಕವಾಗಿ ಪ್ರವಾದಿಯ ಹೆಸರನ್ನು ನೀಡಲಾಗಿದೆ. ಈ ರೀತಿಯಾಗಿ, ಅಲ್ಲಾಹನು ಮತ್ತು ಅವನ ಸಂದೇಶವಾಹಕರ ಆತ್ಮಗೌರವವು ಇಲ್ಲಿ ಪ್ರಚೋದಿಸಲ್ಪಡುವುದಿಲ್ಲ, ಏಕೆಂದರೆ ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ರೆಕ್ಕೆಗಳ ಅಡಿಯಲ್ಲಿ ಬೆಳೆದಿದ್ದೇನೆ ಮತ್ತು ನನ್ನ ಈ ಹೆಜ್ಜೆಯು ನಬೀ ಕರೀಂ ಸಲ್ಲಲ್ಲಹು ಅಲೈಹಿವ ಸಲ್ಲಮ್ ಅವರ ಪಾದದ ಕೆಳಗೆ ಇದೆ. ನಂತರ ನಾನು ಸ್ವಂತವಾಗಿ ಏನನ್ನೂ ಹೇಳಲಿಲ್ಲ, ಬದಲಿಗೆ ನನ್ನ ಭಗವಂತ ನನಗೆ ನೀಡಿದ ಅದೇ ವಹೀಯನ್ನು (ದೇವವಾಣಿಯನ್ನು) ನಾನು ಅನುಸರಿಸಿದ್ದೇನೆ. ಮತ್ತು ಅದರ ನಂತರ, ನಾನು ಸೃಷ್ಟಿಗಳ ಬೆದರಿಕೆಗಳಿಗೆ ಹೆದರುವುದಿಲ್ಲ, ಮತ್ತು ಪುನರುತ್ಥಾನದ ದಿನದಂದು ಪ್ರತಿಯೊಬ್ಬ ವ್ಯಕ್ತಿಯು ತನ್ನ ಕಾರ್ಯಗಳಿಗೆ ಜವಾಬ್ದಾರನಾಗಿರುತ್ತಾನೆ ಮತ್ತು ಅಲ್ಲಾಹನಿಂದ ಏನನ್ನೂ ಮರೆಮಾಡಲಾಗಿಲ್ಲ.

(ಅಲ್–ಇಸ್ತಿಫ್ತಾದ ಉರ್ದು ಅನುವಾದ, ಹಖೀಖತುಲ್ ವಹಿಯ ಅನುಬಂಧ, ಪುಟ–154)

ಈ ಭಾಗದಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಎರಡು ಬಾರಿ ಶಾಶ್ವತ ಪ್ರವಾದಿತ್ವವನ್ನು ನಿರಾಕರಿಸಿದ್ದಾರೆ. ನಾವು ಅರೇಬಿಕ್ ಪಠ್ಯದ ಆ ಭಾಗವನ್ನು ಕೆಳಗೆ ಸೇರಿಸುತ್ತೇವೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"وَاِنَّ رَسُوْلَنَا خَاتَمُ النَّبِيِّيْنَ وَعَلَيْهِ انْقَطَعَتْ سِلْسِلَةُ الْمُرْسَلِيْنَ فَلَيْسَ حَقُّ اَحَدٍ اَنْ يَّدَّعِيَ النُّبُوَّةَ بَعْدَ رَسُوْلِنَا الْمُصْطَفٰى عَلَى الطَّرِيْقَةِ الْمُسْتَقِلَّةِ -"

ವಾಸ್ತವವಾಗಿ, ನಮ್ಮ ಸಂದೇಶವಾಹಕರು ಖಾತಮನ್ನಬೀಈನ್

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಇಂದು ನಾನು ಅಂತಹ ವ್ಯಕ್ತಿಯ ಬಗ್ಗೆ ಪ್ರಸ್ತಾಪಿಸುವೆನು. ಅವರು ತಮ್ಮ ಜೀವಿತವನ್ನು ಅಲ್ಲಾಹನ ಸಂಪ್ರೀತಿಗೆ ಅನುಸಾರವಾಗಿ ಸಾಗಿಸಲು ಪ್ರಯತ್ನಿಸಿದರು. ಈ ಪ್ರಸ್ತಾಪ ಸನ್ಮಾನ್ಯ ಅಮತುಲ್ ಖುದ್ದೂಸ್ ಸಾಹಿಬರದ್ದಾಗಿದೆ. ಅವರು ಹಝ್ರತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ)ರ ಪುತ್ರಿ ಮತ್ತು ಮರ್‌ಹೂಮ್ ಸಾಹಿಬ್‌ಝಾದ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರ ಪತ್ನಿಯಾಗಿದ್ದರು.

ಈ ಲೋಕಕ್ಕೆ ಬರುವ ಪ್ರತಿಯೊಬ್ಬ ಮನುಷ್ಯನು ಒಂದು ನಿರ್ದಿಷ್ಟ ಕಾಲಾವಧಿಯನ್ನು ದಾಟಿಕೊಂಡು ಈ ಲೋಕವನ್ನು ಬಿಟ್ಟು ಹೋಗುತ್ತಾನೆ ಎಂಬುದು ಅಲ್ಲಾಹನ ಕಾನೂನು ಆಗಿದೆ. ಆದರೆ ಯಾರ ಕುರಿತು ಸವಿನೆನಪುಗಳು ಮಾತ್ರ ಬಾಕಿಯುಳಿತ್ತವೋ, ಯಾರು ಜನರಿಗೆ ಪ್ರಯೋಜನಕಾರಿಯಾಗಿರುತ್ತಾರೋ, ಯಾರು ದೀನಿಗೆ ಭೌತಿಕತೆ ಮೇಲೆ ಆದ್ಯತೆಯನ್ನು ತನ್ನ ಕೃತ್ಯಗಳಿಂದ ತೋರಿಸುತ್ತಾರೋ, ಯಾರು ಅಲ್ಲಾಹನ ಮತ್ತು ಪ್ರವಾದಿ(ಸ)ರ ಆಜ್ಞೆಗಳನ್ನು ಪಾಲಿಸಲು ಪ್ರಯತ್ನಿಸುವವರಾಗಿರುತ್ತಾರೋ, ಯಾರು ಹಝ್ರತ್ ಮಸೀಹ್ ಮೌಊದ್(ರ)ರಿಗೆ ಮಾಡಿದ ಬೈಅತ್ತಿನ ಹಕ್ಕನ್ನು ನೆರವೇರಿಸಲು ಪ್ರಯತ್ನಿಸುವವರಾಗಿತ್ತಾರೋ, ಯಾರು ಅಹ್ಮದಿಯಾ ಖಿಲಾಫತಿನೊಂದಿಗೆ ಯಥಾರ್ಥ ನಿಷ್ಠೆಯನ್ನು ಇರಿಸುವವರಾಗಿರುತ್ತಾರೋ, ಯಾರು ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸಲು ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸುವವರಾಗಿತ್ತಾರೋ, ಯಾರು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಸದಾ ಪ್ರಯತ್ನಿಸುವವರಾಗಿತ್ತಾರೋ, ಯಾರಿಗಾಗಿ ಪ್ರತಿಯೊಬ್ಬರ ನಾಲಗೆಯಿಂದ ಪ್ರಶಂಸೆಯ ಮಾತುಗಳು ಹೊರಡುತ್ತವೋ ಅಂಥವರು ಸೌಭಾಗ್ಯಶಾಲಿಗಳು. ಅಂಥವರಿಗೆ ಹಝ್ರತ್ ಪೈಗಂಬರ್(ಸ)ರ ನಿರ್ದೇಶನದ ಅನುಸಾರ ಸ್ವರ್ಗ ಸುನಿಶ್ಚಿತವಾಗಿರುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಅವರೊಡನೆ ಹೀಗೆಯೂ ಹೇಳಿದರು: ಲಜ್ನದ ಜಮಾಅತುಗಳನ್ನು ಒಟ್ಟುಸೇರಿಸಬೇಕು. ಅವರು ಹೋದ ಕೂಡಲೇ ಖಾದಿಯಾನಿನ ಜನರಲ್ ಸೆಕ್ರಟರಿ ಆದರು. ಅನಂತರ 1955ರಲ್ಲಿ ಲೋಕಲ್ ಲಜ್ನ ಸದರ್ ಆದರು. ಅನಂತರ ಭಾರತದ ಲಜ್ನ ಇಮಾಇಲ್ಲಾಹ್ ಸದರ್ ಆದರು. 1959ರಲ್ಲಿ ಸ್ಥಳೀಯ ಲಜ್ನಾ ಇಮಾಅಲ್ಲಾಹ್‌ದ ಸದರ್ ಬೇರೆಯವರು ಆಯ್ಕೆಯಾದರು ಮತ್ತು ನೀವು ಭಾರತದ ಸದರ್ ಲಜ್ನಾ ಆಗಿ ಕಾರ್ಯ ನಿರ್ವಹಿಸಿದರು. ಅಲ್ಲಾಹನ ಅನನುಗ್ರಹದಿಂದ 1999ರ ತನಕ ಅವರು ಈ ಸೇವೆಯಲ್ಲಿ ಇದ್ದರು. ಅದರ ನಂತರ, ಗೌರವ ಸದಸ್ಯರಾಗಿದ್ದರು. ಅವರ ಸೇವಾ ಅವಧಿಯಲ್ಲಿ, ಅವರು ಭಾರತದ ಅನೇಕ ಮಜ್ಲಿಸ್‌ಗಳನ್ನು ಭೇಟಿ ನೀಡಿದರು, ಅವರ ಸೇವಾ ಅವಧಿಯು ನಲವತ್ತಾರು ವರ್ಷಗಳಾಗಿದ್ದವು.

ಖಿಲಾಫತಿನೊಂದಿಗೆ ಅವರಿಗೆ ಬಹಳ ನಿಷ್ಠೆಯ ಸಂಬಂಧವಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ)ರೊಂದಿಗೆ ಅವರು ಇರಿಸಿದ ವಿನಯವಂತಿಕೆ ಮತ್ತು ಸಂಪೂರ್ಣ ನಿಷ್ಠೆಯ ಸಂಬಂಧ ಮುಂದುವರೆದಿತ್ತು ಮತ್ತು ನನ್ನೊಂದಿಗೂ ಅವರು ಅದೇ ಸಂಬಂಧವನ್ನು ನೆಲೆನಿಲ್ಲಿಸಿದ್ದರು. ಇದೊಂದು ಉದಾಹರಣೆಯಾಗಿದೆ.

ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ ಮತ್ತು ಅವರ ಮಕ್ಕಳಿಗೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಆಮೀನ್.
ಖಾದಿಯಾನಿನ ಜನರನ್ನು ಅವರು ಎಂತಹ ಪ್ರೀತಿಯಲ್ಲಿ ಇರಿಸಿದ್ದರೋ ಅದೇ ಪ್ರೀತಿಯಿಂದ ಖಾದಿಯಾನಿನವರು ಪರಸ್ಪರ ಇರಲು ಅಲ್ಲಾಹನು ಸೌಭಾಗ್ಯ ನೀಡಲಿ. ಈಗ ಖಾದಿಯಾನಿನಲ್ಲಿ ಹಝ್ರತ್ ಮಸೀಹ್ ಮಸೀಹ್(ಅ)ರ ಕುಟುಂಬದೊಂದಿಗೆ ನೇರವಾಗಿ ಸಂಬಂಧವಿರುವ ಯಾರೂ ಇಲ್ಲ. ಯಾರಾದರೂ ಅಲ್ಲಿಗೆ ಹೋಗುವಂತಹ ಸ್ಥಿತಿ ಅಲ್ಲಾಹನು ಮಾಡಲಿ.

**ಹಝ್ರತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ)ರ ಪುತ್ರಿ ಮತ್ತು ಮರ್‌ಹೂಮ್ ಸಾಹಿಬ್‌ಝಾದ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರ ಪತ್ನಿಯಾಗಿದ್ದ ಸನ್ಮಾನ್ಯ ಅಮತುಲ್ ಖುದ್ದೂಸ್ ಸಾಹಿಬರ ರವರ ನಮಾಝೆ ಜನಾಝ ಗ್ವಾಯಿಬ್ ಹಾಗೂ ಅವರ ಸದ್ಗುಣಗಳ ಪ್ರಸ್ತಾವನೆ**

ಮಾನ್ಯ ಮುಹಮ್ಮದ್ ಅರ್ಷದ್ ಅಹ್ಮದಿ ಸಾಹಿಬ್ (ಯುಕೆ) ಮತ್ತು ಮಾನ್ಯ ಅಹ್ಮದ್ ಜಮಾಲ್ ಸಾಹಿಬ್ (ಅಮೇರಿಕಾ) ರವರ ನಿಧನದ ಕುರಿತು ಅವರಿಬ್ಬರ ಸದ್ಗುಣಗಳ ಪ್ರಸ್ತಾವನೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **15-09-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ اِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ- بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ـ اَلرَّحْمٰنِ الرَّحِيمِ ـ مٰلِكِ يَوْمِ الدِّينِ ـ

اِيَّاكَ نَعْبُدُ وَاِيَّاكَ نَسْتَعِينُ ـ اِهْدِنَا الصِّرَاطَ الْمُسْتَقِيمَ ـ

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ ـ

ಈ ಲೋಕಕ್ಕೆ ಬರುವ ಪ್ರತಿಯೊಬ್ಬ ಮನುಷ್ಯನು ಒಂದು ನಿರ್ದಿಷ್ಟ ಕಾಲಾವಧಿಯನ್ನು ದಾಟಿಕೊಂಡು ಈ ಲೋಕವನ್ನು ಬಿಟ್ಟು ಹೋಗುತ್ತಾನೆ ಎಂಬುದು ಅಲ್ಲಾಹನ ಕಾನೂನು ಆಗಿದೆ. ಆದರೆ ಯಾರ ಕುರಿತು ಸವಿನೆನಪುಗಳು ಮಾತ್ರ ಬಾಕಿಯುಳಿತ್ತವೋ, ಯಾರು ಜನರಿಗೆ ಪ್ರಯೋಜನಕಾರಿಯಾಗಿರುತ್ತಾರೋ, ಯಾರು ದೀನಿಗೆ ಭೌತಿಕತೆ ಮೇಲೆ ಆದ್ಯತೆಯನ್ನು ತನ್ನ ಕೃತ್ಯಗಳಿಂದ ತೋರಿಸುತ್ತಾರೋ, ಯಾರು ಅಲ್ಲಾಹನ ಮತ್ತು ಪ್ರವಾದಿ(ಸ)ರ ಆಜ್ಞೆಗಳನ್ನು ಪಾಲಿಸಲು ಪ್ರಯತ್ನಿಸುವವರಾಗಿರುತ್ತಾರೋ, ಯಾರು ಹಝ್ರತ್ ಮಸೀಹ್ ಮೌಊದ್(ರ)ರಿಗೆ ಮಾಡಿದ ಬೈಅತ್ತಿನ ಹಕ್ಕನ್ನು ನೆರವೇರಿಸಲು ಪ್ರಯತ್ನಿಸುವವರಾಗಿತ್ತಾರೋ, ಯಾರು ಅಹ್ಮದಿಯಾ ಖಿಲಾಫತಿನೊಂದಿಗೆ ಯಥಾರ್ಥ ನಿಷ್ಠೆಯನ್ನು ಇರಿಸುವವರಾಗಿರುತ್ತಾರೋ, ಯಾರು ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸಲು ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸುವವರಾಗಿತ್ತಾರೋ, ಯಾರು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಸದಾ ಪ್ರಯತ್ನಿಸುವವರಾಗಿತ್ತಾರೋ, ಯಾರಿಗಾಗಿ ಪ್ರತಿಯೊಬ್ಬರ ನಾಲಗೆಯಿಂದ ಪ್ರಶಂಸೆಯ ಮಾತುಗಳು ಹೊರಡುತ್ತವೋ ಅಂಥವರು ಸೌಭಾಗ್ಯಶಾಲಿಗಳು. ಅಂಥವರಿಗೆ ಹಝ್ರತ್ ಪೈಗಂಬರ್(ಸ)ರ ನಿರ್ದೇಶನದ ಅನುಸಾರ ಸ್ವರ್ಗ ಸುನಿಶ್ಚಿತವಾಗಿರುತ್ತದೆ.
(ಸಹೀಹ್ ಬುಖಾರಿ, ಕಿತಾಬುಲ್ ಜನಾಯೆಝ್, ಹದೀಸ್-1367)

ಇಂದು ನಾನು ಅಂತಹ ವ್ಯಕ್ತಿಯ ಬಗ್ಗೆ ಪ್ರಸ್ತಾಪಿಸುವೆನು. ಅವರು ತಮ್ಮ ಜೀವಿತವನ್ನು ಅಲ್ಲಾಹನ ಸಂಪ್ರೀತಿಗೆ ಅನುಸಾರವಾಗಿ ಸಾಗಿಸಲು ಪ್ರಯತ್ನಿಸಿದರು. ಈ ಪ್ರಸ್ತಾಪ ಸನ್ಮಾನ್ಯ ಅಮತುಲ್ ಖುದ್ದೂಸ್ ಸಾಹಿಬರದ್ದಾಗಿದೆ. ಅವರು ಹಝ್ರತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ)ರ ಪುತ್ರಿ ಮತ್ತು ಮರ್‌ಹೂಮ್ ಸಾಹಿಬ್‌ಝಾದ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರ ಪತ್ನಿಯಾಗಿದ್ದರು.

ಮತ್ತು ಹಝ್ರತ್ ಮುಸ್ಲಿಹ್ ಮೌಊದ್(ರ)ರ ಸೊಸೆಯಾಗಿದ್ದರು. ಇವರು ಖಾದಿಯಾನಿನಲ್ಲಿ ನೆಲೆಸಿದ್ದರು. ಆದರೆ ಸ್ವಲ್ಪ ಕಾಲಕ್ಕೆ ತನ್ನ ಪುತ್ರಿಯರನ್ನು ಭೇಟಿಯಾಗಲು ರಬ್ವಗೆ ಬಂದಿದ್ದರು. ಅಲ್ಲೇ 96ನೇ ವಯಸ್ಸಿನಲ್ಲಿ ಅಲ್ಲಾಹನ ವಿಧಿ ಪ್ರಕಾರ ನಿಧನಗೊಂಡರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಸಂಪತ್ತಿನ ಒಂಬತ್ತನೇ ಒಂದು ಭಾಗವನ್ನು ವಸಿಯ್ಯತ್ ಮಾಡಿದ್ದರು. ಅವರ ಜೀವನದ ಬಗ್ಗೆ ಕೆಲವು ವಿಷಯಗಳನ್ನು ಉಲ್ಲೇಖಿಸುತ್ತೇನೆ.

1951ರಲ್ಲಿ ಜಲ್ಸ ಸಾಲಾನದ ವೇಳೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರ ನಿಕಾಹನ್ನು ಅಮತುಲ್ ಖುದ್ದೂಸ್ ಸಾಹಿಬರೊಡನೆ ನಡೆಸಿದರು. ಮತ್ತು ಕೆಲವು ಸಂದರ್ಭಗಳಿಂದಾಗಿ, ಜಲ್ಸದ ಪ್ರಾರಂಭದ ಮೊದಲು ನಾನು ಎರಡು ನಿಕಾಹ್‌ಗಳನ್ನು ಘೋಷಿಸಲು ಬಯಸುತ್ತೇನೆ ಎಂದು ಹೇಳಿದರು. ಒಂದು ಅವರದು, ಇನ್ನೊಂದು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ರವರ ಪುತ್ರಿಯದ್ದಾಗಿತ್ತು, ಮತ್ತು ಅವರು ನಾನು ಎರಡು ನಿಕಾಹ್‌ಗಳನ್ನು ಮಾತ್ರ ನಡೆಸುತ್ತೇನೆ ಎಂದು ಹೇಳುತ್ತಾರೆ, ಏಕೆಂದರೆ ನಾನು ಇದರ ಬಗ್ಗೆ ಮೊದಲು ಘೋಷಿಸಿದರೆ, ನಂತರ ಅನೇಕ ನಿಕಾಹ್‌ಗಳ ವಿನಂತಿಗಳು ಬರುತ್ತಿದ್ದವು ಆದರೆ ನಂತರ ಜಲ್ಸದ ಈ ವಾತಾವರಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಇಡೀ ಭಾಷಣದ ಸಮಯ ಮುಕ್ತಾಯವಾಗುತ್ತದೆ, ಆದಾಗ್ಯೂ, ಈ ಜಲ್ಸದಲ್ಲಿ, ಅವರು ಈ ಎರಡು ನಿಕಾಹ್‌ಗಳನ್ನು ನಡೆಸಿದರು ಮತ್ತು ಅವರ ಸೋದರಸಂಬಂಧಿ ಸೈಯದ್ ದಾವೂದ್ ಅಹ್ಮದ್ ಸಾಹಿಬ್ ಅವರನ್ನು ಅವರ ಪರವಾಗಿ ವಕೀಲರಾಗಿ ನೇಮಿಸಲಾಯಿತು. ಮತ್ತು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಕೂಡ ಈ ನಿಕಾಹ್‌ನಲ್ಲಿ ಹೀಗೂ ಹೇಳಿದರು, ಸಾಮಾನ್ಯವಾಗಿ ನಾನು ನನ್ನ ಪುತ್ರಿಯರ ನಿಕಾಹ್‌ವನ್ನು ವಾಖಿಫೀನ್ ಝಿಂದಗೀ ಅವರೊಂದಿಗೆ ಮಾತ್ರ ನಡೆಸುತ್ತೇನೆ. ಅಮತುನ್ನಸೀರ್ ಸಾಹಿಬಾ ಅವರ ನಿಕಾಹ್ ಪೀರ್ ಮೊಯಿನುದ್ದೀನ್ ಸಾಹಿಬ್ ಅವರೊಂದಿಗೆ ಆಗಿತ್ತು. (ಖುತ್ಬಾತೆ ಮಹ್ಮೂದ್, ಸಂಪುಟ-3, ಪುಟ-650-651)

ಅವರು ಮದುವೆಯಾದಾಗ, ಹಝ್ರತ್ ಡಾ. ಮೀರ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್ ಅವರ ಧರ್ಮಪತ್ನಿ ಅವರ ಕೋರಿಕೆಯ ಮೇರೆಗೆ, ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ರುಖ್ಸತಾನದ (ಮದುಮಗಳ ವಿದಾಯ) ಸಂದರ್ಭದಲ್ಲಿ ಹುಡುಗಿಯ ಕುಟುಂಬದ ಪರವಾಗಿ ಭಾಗವಹಿಸಿದರು. (ಅಲ್‌ಫಝಲ್ ಲಾಹೋರ್ ದಿನಪತ್ರಿಕೆ, 26-10-1952, ಪುಟ-3) ವಿವಾಹದ ವೇಳೆ ಹಝ್ರತ್ ಮುಸ್ಲಿಹ್ ಮೌಊದ್(ರ) ತನ್ನ ಪುತ್ರ ಕಡೆಯಿಂದ ಹೋಗುವುದಕ್ಕೆ ಬದಲಿಗೆ ಹುಡುಗಿಯರ ಕಡೆಯಿಂದ ಪಾಲ್ಗೊಂಡಿದ್ದರು.

ಅಮತುಲ್ ಖುದ್ದೂಸ್ ಸಾಹಿಬರಿಗೆ ಅಲ್ಲಾಹನು ಮೂವರು ಪುತ್ರಿಯರನ್ನು ಮತ್ತು ಒಬ್ಬ ಪುತ್ರನನ್ನು ದಯಪಾಲಿಸಿದನು. ಅವರ ಮಗಳಾದ ಅಮತುಲ್ ಅಲೀಂ ಸಾಹಿಬ ಪಾಕಿಸ್ತಾನದಲ್ಲಿ ಲಜ್ನ ಸದರ್ ಆಗಿರುವರು. ಅವರು ತಹ್ರೀಕ್ ಜದೀದಿನ ವಕೀಲುಲ್ ಆಅ್‌ಲಾ ಆಗಿರುವ ಮನ್ಸೂರ್ ಅಹ್ಮದ್ ಖಾನ್ ಸಾಹಿಬ್‌ರ ಪತ್ನಿಯಾಗಿರುವರು. ಎರಡನೇ ಪುತ್ರಿಯಾದ ಅಮತುಲ್ ಕರೀಂ ಸಾಹಿಬ ಕ್ಯಾಪ್ಟನ್ ಮಾಜಿದ್ ಸಾಹಿಬ್‌ರ ಪತ್ನಿಯಾಗಿರುವರು. ಮೂರನೇ ಪುತ್ರಿಯಾದ ಅಮತುರ್‌ರೌಫ್ ಸಾಹಿಬ ಡಾಕ್ಟರ್ ಇಬ್ರಾಹೀಂ ಮುನೀಬ್ ಸಾಹಿಬ್‌ರ ಪತ್ನಿಯಾಗಿರುವರು. ಅವರು ಮಗನಾದ ಮಿರ್ಝಾ ಕಲೀಂ ಅಹ್ಮದ್ ಸಾಹಿಬ್ ಅಮೇರಿಕದಲ್ಲಿ ನೆಲೆಸಿರುವರು.

ಸಾಹಿಬ್‌ಝಾದ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರು ತನ್ನ ವಿವಾಹದ ವೇಳೆ ಪಾಕಿಸ್ತಾನಕ್ಕೆ ಹೋಗಿದ್ದರು. ಅವರ ವಿವಾಹವಾಗಿ ಕೆಲವೇ ದಿನಗಳು ಆಗಿದ್ದುವು. ಅವರು ತನ್ನ ಪತ್ನಿಯನ್ನು ಖಾದಿಯಾನಿಗೆ ತನ್ನ ಜೊತೆಗೆ ಕೊಂಡುಹೋಗಲು ಕಾಗದಪತ್ರಗಳನ್ನು ತಯಾರು ಮಾಡುತ್ತಿದ್ದರು. ಇಂದಿನಂತೆ ಪಾಕಿಸ್ತಾನ ಮತ್ತು ಹಿಂದೂಸ್ತಾನದ ಸಂಬಂಧ ಹದಗೆಟ್ಟಿದ್ದ ಆ ಕಾಲದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರೊಡನೆ ಹೇಳಿದರು: ಪತ್ನಿಯ ಡೊಕ್ಯೂಮೆಂಟ್‌ಗಳು ತಯಾರಾಗುತ್ತಾ ಇರುವುವು, ನೀವು ಅದನ್ನು ಬಿಟ್ಟು ಮತ್ತು ಬೇಗನೇ ಖಾದಿಯಾನ್‌ಗೆ ಮರಳಿ ಹೋಗಿ. ಏಕೆಂದರೆ, ಅಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅವರ ಕುಟುಂಬದ ಸದಸ್ಯರಲ್ಲಿ ಯಾರಾದರೂ ಇರಬೇಕು.

ಬೇಗನೇ ವಿಮಾನದಲ್ಲಿ ಸೀಟ್ ಬುಕ್ ಮಾಡಿ. ಸಾಮಾನ್ಯ ಫ್ಲೈಟ್ ಸಿಗದೇ ಇದ್ದರೆ ಹೋಗಿ ಚಾರ್ಟರ್ಡ್ ಫ್ಲೈಟ್ ಬುಕ್ ಮಾಡಬೇಕಾಗಿ ಬಂದರೂ ಕೂಡ ಹೋಗಲೇ ಬೇಕು. ನೀವು ನಿಮ್ಮ ಮಾದರಿಯನ್ನು ತೋರಿಸದಿದ್ದರೆ ಮತ್ತು ತ್ಯಾಗವನ್ನು ಮಾಡದಿದ್ದರೆ ಇತರ ಜನರು ಹೇಗೆ ತ್ಯಾಗ ಮಾಡುವರು. ಇದು ಸಾಹಿಬ್‌ಝಾದ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರ ತ್ಯಾಗವಾಗಿರುವುದರ ಜೊತೆಗೆ ಅಮತುಲ್ ಖುದ್ದೂಸ್ ಸಾಹಿಬ್‌ರ ತ್ಯಾಗ ಕೂಡ ಆಗಿತ್ತು.

ದಸ್ತಾವೇಜುಗಳು ಯಾವಾಗ ತಯಾರಾಗುವುವು ಎಂದು ಗೊತ್ತಿರಲಿಲ್ಲ. ವಿಷಮ ಘಟ್ಟವಾಗಿತ್ತು. ಈ ಎಲ್ಲದ್ದಕ್ಕೂ ಹೊರತಾಗಿ ಇದು ಖಲೀಫತುಲ್ ಮಸೀಹ್‌ರ ಆಜ್ಞೆಯಾಗಿತು. ಆದ್ದರಿಂದ ಅವರು ಬಹಳ ಸಂತೋಷದಿಂದ ತನ್ನ ಗಂಡನನ್ನು ಬೀಳ್ಕೊಟ್ಟರು ಮತ್ತು ದೀನಿಗೆ ಲೌಕಿಕತೆ ಮೇಲೆ ಆದ್ಯತೆ ನೀಡಿದರು. ಮಿಯಾಂ ವಸೀಮ್ ಅಹ್ಮದ್ ಸಾಹಿಬ್ ಅವರನ್ನು ಕಳುಹಿಸಲು ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಲಾಹೋರ್ ವಿಮಾನ ನಿಲ್ದಾಣಕ್ಕೆ ಬಂದಾಗ, ಡಾ. ಹೆಷ್ಮತುಲ್ಲಾ ಸಾಹಿಬ್ ಅವರು ವಿಮಾನವು ಕಣ್ಮರೆಯಾಗುವವರೆಗೂ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ವಿಮಾನ ನಿಲ್ದಾಣದಲ್ಲಿ ನಿರಂತರವಾಗಿ ವಿಮಾನವನ್ನು ವೀಕ್ಷಿಸುತ್ತಾ ಪ್ರಾರ್ಥಿಸುತ್ತಿದ್ದರು ಎಂದು ಹೇಳಿದರು. ಸನ್ಮಾನ್ಯ ಅಮತುಲ್ ಖುದ್ದೂಸ್ ಸಾಹಿಬರ ಕಾಗದಪತ್ರಗಳು ತಯಾರಾಗಲು ಸುಮಾರು ಒಂದು ವರ್ಷ ಹಿಡಿಯಿತು.

ಅವರು ಖಾದಿಯಾನಿಗೆ ಹೋಗಲು ತಯಾರಾದಾಗ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳಿದರು: ಉಮ್ಮೇ ನಾಸಿರಿನ ಮನೆಯಲ್ಲಿ ತಂಗಿರಿ. ಅಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರು ಬಹಳವಾಗಿ ನಡೆದಾಡಿದ್ದರು ಮತ್ತು ಅದರ ಅಂಗಳದಲ್ಲಿ ಹುಝೂರ್ ದರ್ಸ್ ಸಹ ನಡೆಸಿದ್ದರು. (ಖುತ್ಬಾತೆ ಮಸ್ರೂರ್, ಸಂಪುಟ-5, ಪುಟ-180-181, 184-185)

ಸಾಹಿಬ್ಝಾದಿ ಅಮತುಲ್ ಖುದ್ದೂಸ್ ಸಾಹಿಬರು ಖಾದಿಯಾನ್‌ಗೆ ಹೋಗಿ ಜಮಾಅತ್‌ನ ಮಹಿಳೆಯರನ್ನು ಸಂಘಟಿಸುವಲ್ಲಿ, ದರ್ವೇಶ್‌ಗಳ ಹೆಂಡತಿಯರು ಮತ್ತು ಮಕ್ಕಳೊಂದಿಗೆ ಸಹಾನುಭೂತಿ ಹೊಂದುವಲ್ಲಿ ದೊಡ್ಡ ಪಾತ್ರವನ್ನು ವಹಿಸಿದರು. ಮತ್ತು ಅವರ ಕಾರಣದಿಂದಾಗಿ, ಅಲ್ಲಿನ ಮಹಿಳೆಯರಿಗೆ ಬಹಳ ಸಮಾಧಾನವಾಯಿತು. ಅಲ್ಲಿನ ದರ್ವೇಶ್‌ಗಳ ಪತ್ನಿಯರಿಂದ ಅಥವಾ ಹೆಣ್ಣುಮಕ್ಕಳಿಂದ ನನಗೆ ಲೆಕ್ಕವಿಲ್ಲದಷ್ಟು ಪತ್ರಗಳು ಬಂದಿವೆ. ಲಂಡನ್‌ಗೆ ಆಗಮಿಸಿದ ನಂತರ, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ರವರು ಶುಕ್ರವಾರ, ಮೇ 4, 1984 ರಂದು ತಮ್ಮ ಮೊದಲ ಖುತ್ಬ ಜುಮುಅವನ್ನು ನೀಡಿದರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪದಗಳಲ್ಲಿ **ಮನ್ ಅನ್ಸಾರೀ ಇಲಲ್ಲಾಹ್** ಎಂದು ಕರೆದರು ಮತ್ತು ಇಸ್ಲಾಂ ಧರ್ಮದ ಪ್ರಚಾರಕ್ಕಾಗಿ ವಿಶಾಲವಾದ ಕಾರ್ಯಕ್ರಮವನ್ನು ಘೋಷಿಸಿದರು. (ಖುತ್ಬತೆ ತಾಹಿರ್, ಸಂಪುಟ-3, ಪುಟಗಳು 232-233, ಖುತ್ಬಾ 4 ಮೇ 1984) ಮತ್ತು ಈ ಉದ್ದೇಶಗಳನ್ನು ಪೂರೈಸಲು ಒಂದು ವಿಶಾಲವಾದ ಸಂಕೀರ್ಣದ ಅಗತ್ಯವಿದೆ ಎಂದು ಹೇಳಿದರು. ಯುರೋಪ್‌ಗೆ ಎರಡು ಹೊಸ ಕೇಂದ್ರಗಳನ್ನು ಯೋಜಿಸಲಾಗಿದೆ, ಒಂದು ಇಂಗ್ಲೆಂಡ್‌ನಲ್ಲಿ ಮತ್ತು ಒಂದು ಜರ್ಮನಿಯಲ್ಲಿ. ಇದಕ್ಕಾಗಿ ಸರ್ವಶಕ್ತನಾದ ಅಲ್ಲಾಹನು ತನ್ನ ಅನುಗ್ರಹದಿಂದ ಹಣವನ್ನು ಒದಗಿಸುತ್ತಾನೆ. (ಖುತ್ಬಾತೆ ತಾಹಿರ್, ಸಂಪುಟ-3, ಪುಟ-264-266, ಖುತ್ಬ 18-05-1984) ಹೀಗೆ ಜನರಿಗೆ ಈ ಯೋಜನೆಯಲ್ಲಿ ಬಂದು ಸೇರಲಿ ಆಜ್ಞಾಪಿಸಿದರು.

ಹೀಗಾಗಿ, ಖಾದಿಯಾನ್‌ನ ಲಜ್ನಾವು ಮತ್ತೊಮ್ಮೆ ಬೆಂಬಲಕ್ಕೆ ಕರೆ ನೀಡಿತು ಮತ್ತು ಭಾರತದ ಲಜ್ನಾದ ಅಧ್ಯಕ್ಷರಾಗಿದ್ದ ಸಾಹಿಬ್ಝಾದಿ ಅಮತುಲ್ ಖುದ್ದೂಸ್ ಸಾಹಿಬ ಅವರು ತಮ್ಮ ವರದಿಯಲ್ಲಿ ಬರೆದಿದ್ದಾರೆ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಲಜ್ನಾ ಇಮಾಅಲ್ಲಾಹ್ ಭಾರತವು ಹುಝೂರ್(ರ)ರವರ ಧ್ವನಿಗೆ ಸ್ಪಂದಿಸಿತು ಮತ್ತು ಈ ಚಳುವಳಿಯಲ್ಲಿ ಮುನ್ನಡೆದು ಭಾಗವಹಿಸಿದರು ಮತ್ತು ತಮ್ಮಲ್ಲಿದ್ದ ಚಿನ್ನಾಭರಣ ಮತ್ತು ನಗದನ್ನು ಪ್ರಸ್ತುತಪಡಿಸಿದ್ದಾರೆ. ಅವರು ಸ್ವತಃ ಕೂಡ ತನ್ನೆಲ್ಲ ಆಭರಣಗಳನ್ನು ಈ ಯೋಜನೆಗಾಗಿ ಅರ್ಪಿಸಿದರು. ಭಾರತದ ಲಜ್ನಾ ಅವರ ಕಡೆಯಿಂದ ಮೊದಲು ಖಾದಿಯಾನ್‌ನ ಲಜ್ನಾದ ವಾಗ್ದಾನಗಳನ್ನು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ರವರ ಸೇವೆಗೆ ಕಳುಹಿಸಲಾಯಿತು. ಇದರ ಬಗ್ಗೆ, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ರವು, ಆಗಸ್ಟ್ 10, 1984 ರಂದು ತಮ್ಮ ಖುತ್ಬ ಜುಮುಅದಲ್ಲಿ ಖಾದಿಯಾನ್‌ನ ಲಜ್ನಾವನ್ನು ಪ್ರಸ್ತಾಪಿಸುತ್ತ ಹೇಳೀದರು: "ಖಾದಿಯಾನ್‌ನ ಲಜ್ನಾದ ಬಗ್ಗೆ ನನಗೆ ವರದಿ ಬಂದಿದೆ ಮತ್ತು ನಾನು ಅದಕ್ಕಾಗಿ ಕಾಯುತ್ತಿದ್ದೆ. ಏಕೆಂದರೆ ತೆಹ್ರೀಕ್-ಎ-ಜದೀದ್‌ನ ತ್ಯಾಗಗಳು ಪ್ರಾರಂಭವಾದಾಗ. ಖಾದಿಯಾನ್‌ನ

ಮಹಿಳೆಯರಿಗೆ ಅಸಾಮಾನ್ಯ ತ್ಯಾಗವನ್ನು ಮಾಡುವ ಅವಕಾಶ ಲಭಿಸಿತು. ಈಗ ಅಲ್ಲಿ ಉಳಿದಿರುವುದು ಕೆಲವೇ ಕೆಲವು ಮಹಿಳೆಯರು, ಆದರೆ ಅವರ ಬಗ್ಗೆ ಮಾಹಿತಿ ಪಡೆಯಲು ನಾನು ಕಾಯುತ್ತಿದ್ದೆ, ಏಕೆಂದರೆ ಅವರು ತ್ಯಾಗ ಕ್ಷೇತ್ರದಲ್ಲಿ ಮುಂದೆ ಇರಲು ಅರ್ಹರಾಗಿರುತ್ತಾರೆ ಮತ್ತು ಖಾದಿಯಾನ್‌ನ ಹೆಸರು ಆ ಕಾಲದಲ್ಲಿ ಹೇಗೆ ಉತ್ತುಂಗದಲ್ಲಿತ್ತು ಅದೇ ರೀತಿಯಲ್ಲಿ ಇಂದೂ ಸಹ ಉತ್ತುಂಗದಲ್ಲಿರಿಸಬೇಕು. ಅಲ್‌ಹಮ್ದುಲಿಲ್ಲಾಹ್ ಅಲ್ಲಿನ ವರದಿಯೂ ಲಭಿಸಿದೆ. ಲಜ್ನಾ ಇಮಾಅಲ್ಲಾಹ್ ಭಾರತದ ಅಧ್ಯಕ್ಷರು ಜುಲೈ 16 ರಂದು ಹುಝೂರ್ ಅವರ ಸೇವೆಯಲ್ಲಿ ಹೊಸ ಕೇಂದ್ರಕ್ಕೆ ಖಾದಿಯನ್‌ನ ಲಜ್ನಾ ಮತ್ತು ನಾಸಿರಾತ್‌ನ ವಾದಾನಗಳನ್ನು ಬರೆದಿದ್ದೇನೆ ಎಂದು ತಿಳಿಸುತ್ತಾರೆ. ಮತ್ತೆ ಅವರು ಬರೆಯುತ್ತಾರೆ "ಹುಝೂರ್ ಅವರ ಖುತ್ಬಾಗಳು ಇಲ್ಲಿನ ಮಹಿಳೆಯರಲ್ಲಿ ಒಂದು ಉತ್ಸಾಹ ತುಂಬಿದೆ ಮತ್ತು ಅಲ್ಲಾಹನ ಅನುಗ್ರಹದಿಂದ ಅವರು ತಮ್ಮಲ್ಲಿರುವದನ್ನು ಅರ್ಪಿಸಿದ್ದಾರೆ, ಆದರೆ ಬಾಯಾರಿಕೆ ಇನ್ನೂ ತಣಿದಿಲ್ಲ. ಎಷ್ಟು ಉತ್ಸಾಹವಿದೆ ಎಂದರೆ ದೇವರ ಕಾರ್ಯಗಳಿಗೆ ಇನ್ನು ಹೆಚ್ಚು ಇದ್ದರೆ, ಅದನ್ನು ಸಹ ಅರ್ಪಿಸಲಾಗುವುದು." (ಖುತ್ಬಾತೆ ತಾಹಿರ್, ಸಂಪುಟ–3, ಪುಟ–434, ಖುತ್ಬ ಜುಮುಅ, ಆಗಸ್ಟ್ 10, 1984)

ಇದು ಸಾಹಿಬ್ಜಾದಿ ಅಮತುಲ್ ಖುದ್ದೂಸ್ ಸಾಹಿಬ ಅವರು ಖಲೀಫತುಲ್ ಮಸೀಹ್ ರಬಿ(ರ) ಅವರಿಗೆ ಬರೆದ ಪತ್ರವಗಿದೆ. 1991ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಖಾದಿಯಾನಿಗೆ ಹೋದಾಗ, ಆ ಸಂದರ್ಭದಲ್ಲಿ ಅವರು ಖಾದಿಯಾನಿನ ಲಜ್ನದ ಧನತ್ಯಾಗಗಳನ್ನು ಬಹಳ ಆಕರ್ಷಕ ಶೈಲಿಯಲ್ಲಿ ಪ್ರಸ್ತಾಪಿಸಿದರು. ಅವರು ಹೇಳಿದರು: ಭಾರತದ ಲಜ್ನಗಳಲ್ಲಿ ಎಲ್ಲರ ಕುರಿತು ನನಗೆ ಹೇಳಲಿಕ್ಕಾಗದು. ಆದರೆ ಖಾದಿಯಾನಿನ ಲಜ್ನಗಳ ಕುರಿತು ಹೇಳುತ್ತೇನೆ. ಅವರು ಅಲ್ಲಾಹನ ಅನುಗ್ರಹದಿಂದ ಧನತ್ಯಾಗದಲ್ಲಿ ಅಪ್ರತಿಮವಾದ ಮಾದರಿಯುನ್ನು ತೋರಿಸುವವರಾಗಿದ್ದಾರೆ. ಖಾದಿಯಾನ್ ಜಮಾಅತ್ ಅತ್ಯಂತ ಬಡ ಜಮಾಅತ್ ಆಗಿದೆ, ಆದರೆ ಇಲ್ಲಿ ಮಹಿಳೆಯರು ಮತ್ತು ಹುಡುಗಿಯರು ಎಷ್ಟು ಉತ್ಸಾಹದಿಂದ ಮತ್ತು ಹುಮ್ಮಸ್ಸಿನಿಂದ ಭಾಗವಹಿಸುತ್ತಾರೆ ಎಂಬುದನ್ನು ನಾನು ಯಾವಾಗಲೂ ನೋಡಿದ್ದೇನೆ, ಕೆಲವೊಮ್ಮೆ ನನ್ನ ಹೃದಯ ಅವರನ್ನು ತಡೆಯಲು ಬಯಸುತ್ತದೆ, ನಿಮ್ಮಲ್ಲಿ ಇಷ್ಟು ಶಕ್ತಿ ಇಲ್ಲ ಎಂದು ಮತ್ತು ನಾನು ಅವರ ಬಗ್ಗೆ ಸಂತೋಷದಿಂದ ಚಿಂತಿಸುತ್ತೇನೆ, ಆದರೆ ಅವರು ಯಾರಿಗಾಗಿ ತ್ಯಾಗ ಮಾಡಿದರು ಅವರಿಗೆ ಹೆಚ್ಚು ದಯಪಾಲಿಸುವುದು ಹೇಗೆ ಎಂದು ತಿಳಿದಿದೆ ಎಂದು ನಾನು ಭಾವಿಸುತ್ತೇನೆ. ಅದೇ ಸರ್ವಶಕ್ತನಾದ ಅಲ್ಲಾಹನು ಅವರ ಭವಿಷ್ಯವನ್ನು ಧರ್ಮ ಮತ್ತು ಲೌಕಿಕ ಸಂಪತ್ತನ್ನು ತನ್ನ ಅನುಗ್ರಹದಿಂದ ತುಂಬಿಸುತ್ತಾನೆ.

ಮತ್ತೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಅವರು ಹೇಳಿದರು: ಒಂದು ಸಂದರ್ಭದಲ್ಲಿ, ನಾನು ಕೇಂದ್ರಗಳಿಗೆ ಯೋಜನೆಗಳನ್ನು ರೂಪಿಸಿದಾಗ, ಅಹ್ಮದಿ ಹುಡುಗಿಯರು ಚಿಕ್ಕ ಚಿಕ್ಕ ಕಾಜಿಗಳು ಸಿದ್ಧಗೊಳಿಸಿದ್ದರು ಅವುಗಳು ಒಡೆಯಲು ಪ್ರಾರಂಭಿಸಿದವು ಮತ್ತು ಅವರು ಉಳಿಸಿದ ಕೆಲವು ಕಾಸುಗಳು, ಕೆಲವು ಟಿಕ್ಕಾಗಳನ್ನು ಧರ್ಮದ ಸಲುವಾಗಿ ಅರ್ಪಿಸಲಾಯಿತು. ಮುಂದೆ ಅವರು ಹೇಳಿದರು: ನಮ್ಮ ಪ್ರಭುವೂ ಎಂತಹ ದಯಾಲು ಆಗಿದ್ದಾನೆ, ಎಷ್ಟು ಮಹೋನ್ನತನಾಗಿದ್ದಾನೆ. ಕೆಲವೊಮ್ಮೆ ಕೋಟಿಗಟ್ಟಲೆ ಪ್ರೀತಿ ಮತ್ತು ವಾತ್ಸಲ್ಯವಿಲ್ಲದೆ ಅವನ ಪಾದಕ್ಕೆ ಅರ್ಪಿಸಿದರೂ ಅವರು ತಿರಸ್ಕರಿಸುತ್ತಾನೆ, ಮುಗ್ಗರಿಸುವುದಿಲ್ಲ, ಅದಕ್ಕೆ ಯಾವುದೇ ಸ್ಥಾನಮಾನವಿಲ್ಲ, ಆದರೆ ಪ್ರಾಮಾಣಿಕವಾಗಿ ಮತ್ತು ಬಡ ಜನರು ಪ್ರೀತಿ ಪ್ರೇಮದಿಂದ ತನ್ನ ಕೇವಣಿ ನೀಡಿದರೆ, ಅವನು ಅದನ್ನು ಹೆಚ್ಚಿಸುತ್ತಾನೆ. ಮತ್ತು ಪ್ರೀತಿಯಿಂದ ಅದನ್ನು ತನ್ನ ಪ್ರೇಮಿ ಮತ್ತು ಪ್ರೀತಿಪಾತ್ರರ ಉಡುಗೋರೆಗಳನ್ನು ಸ್ವೀಕರಿಸಿ ಅದನ್ನು ಚುಂಬಿಸುತ್ತಾನೆ. ದೇವರ ಚುಂಬನಗಳು ಕೆಲವು ಬಣ್ಣಗಳನ್ನು ಹೊಂದಿರುತ್ತವೆ ಮತ್ತು ನಾನು ನಿಸ್ಸಂದೇಹವಾಗಿ ಹೇಳುತ್ತೇನೆ ಅಲ್ಲಾಹನು ಈ ಕೆಲವು ಮೊತ್ತವನ್ನು ಅವಶ್ಯವಾಗಿ ಚುಂಬಿಸಿರಬಹುದು. (ಹವ್ವ ಕೀ ಬೇಟಿಯಾಂ, ಪುಟ–87–88, ಜಲ್ಸ ಸಲಾನ ಖಾದಿಯಾನ್ ಮಸ್ತುರಾತ್ ಸೆ ಖಿತಾಬ್ 27-12-1991) ಇದು ಅವರು(ರಹ್) ಅಲ್ಲಿಯ ಜಲ್ಸದಲ್ಲಿ ನೀಡಿದ ಭಾಷಣದ ಆಯ್ದ ಭಾಗವಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಅವರೊಡನೆ ಹೀಗೆಯೂ ಹೇಳಿದರು: ಲಜ್ನದ ಜಮಾಅತುಗಳನ್ನು ಒಟ್ಟುಸೇರಿಸಬೇಕು. ಅವರು ಹೋದ ಕೂಡಲೇ ಖಾದಿಯಾನಿನ ಜನರಲ್ ಸೆಕ್ರೆಟರಿ ಆದರು. ಅನಂತರ 1955ರಲ್ಲಿ ಲೋಕಲ್ ಲಜ್ನ ಸದರ್ ಆದರು. ಅನಂತರ ಭಾರತದ ಲಜ್ನ ಇಮಾಇಲ್ಲಾಹ್ ಸದರ್ ಆದರು. 1959ರಲ್ಲಿ ಸ್ಥಳೀಯ ಲಜ್ನಾ ಇಮಾಅಲ್ಲಾಹ್‌ದ ಸದರ್ ಬೇರೆಯವರು ಆಯ್ಕೆಯಾದರು ಮತ್ತು ನೀವು ಭಾರತದ ಸದರ್ ಲಜ್ನಾ ಆಗಿ ಕಾರ್ಯ ನಿರ್ವಹಿಸಿದರು. ಅಲ್ಲಾಹನ ಅನನುಗ್ರಹದಿಂದ 1999ರ ತನಕ ಅವರು ಈ ಸೇವೆಯಲ್ಲಿ ಇದ್ದರು. ಅದರ ನಂತರ, ಗೌರವ ಸದಸ್ಯರಾಗಿದ್ದರು. ಅವರ ಸೇವಾ ಅವಧಿಯಲ್ಲಿ, ಅವರು ಭಾರತದ ಅನೇಕ ಮಜ್ಲಿಸ್‌ಗಳನ್ನು ಭೇಟಿ ನೀಡಿದರು, ಅವರ ಸೇವಾ ಅವಧಿಯು ನಲವತ್ತಾರು ವರ್ಷಗಳಗಿದ್ದವು. ಪ್ರಾರಂಭದಲ್ಲಿ ಲಜ್ನಾ ಕಾರ್ಯವನ್ನು ಸಂಘಟಿಸುವಲ್ಲಿ ಅನೇಕ ತೊಂದರೆಗಳು ಎದುರಾದವು. ಅವರು ಪತ್ರಗಳನ್ನು ಬರೆಯುತ್ತಿದ್ದರು, ಆದರೆ ಉತ್ತರ ಲಭಿಸುತ್ತಿರಲಿಲ್ಲ. ನಂತರ ಸಾಹಿಬ್ಜಾದಾ ಮಿರ್ಝಾ ವಸೀಮ್ ಅಹ್ಮದ್ ಸಾಹಿಬ್ ಅವರ ಹೆಸರಿನಲ್ಲಿ ವಿಳಾಸವನ್ನು ನೀಡಲಾಯಿತು, ಹೀಗೆ ಅವರು ಕ್ರಮೇಣ ಜಮಾಅತ್‌ಗಳನ್ನು ಒಗ್ಗೂಡಿಸಲು ಪ್ರಾರಂಭಿಸಿದರು. ಭಾರತದಲ್ಲಿ ಅನೇಕ ಸ್ಥಳೀಯ ಭಾಷೆಗಳಿವೆ, ಸ್ಥಳೀಯ ಭಾಷೆಗಳಲ್ಲಿ ಪತ್ರಗಳನ್ನು ಸ್ವೀಕರಿಸುವ ಸಮಸ್ಯೆಯೂ ಇತ್ತು. ಆದ್ದರಿಂದ ಅವುಗಳನ್ನು ಭಾಷಾಂತರಿಸಲು ಮುಅಲ್ಲಿಮೀನ್‌ಗಳ ಸಹಾಯ ಪಡೆಯಲಾಗುತ್ತಿತ್ತು. ನಂತರ ಕ್ರಮೇಣ ಹಝ್ರತ್ ಮಿರ್ಝಾ ವಸೀಮ್ ಅಹ್ಮದ್ ಸಾಹಿಬ್ ಅವರೊಂದಿಗೆ ಬಾಹ್ಯ ಜಮಾಅತ್‌ಗಳಿಗೆ ಭೇಟಿ ನೀಡಲು ಪ್ರಾರಂಭಿಸಿದರು ಮತ್ತು ವಿಭಜನೆಯ ನಂತರ ಸಾಕಷ್ಟು ಸಹಾಯದ ಅಗತ್ಯವಿರುವ ಜಮಾಅತ್‌ಗಳನ್ನು ಸಂಘಟಿಸಿದರು.

ನಂತರ, ಅದೇ ರೀತಿ, ಅವರ ಪುತ್ರಿ ಅಮತುಲ್ ಅಲೀಮ್ ಬರೆಯುತ್ತಾರೆ: ಅವರು ಖಲೀಫ ರಾಬಿ(ರಹ್) ರವರ ಖಿಲಾಫತ್ ಕಾಲಘಟ್ಟದಲ್ಲಿ ಭಾರತದಿಂದ ಪಡೆದ ಪ್ರಾರ್ಥನಾ ಪತ್ರಗಳ ಸಾರಾಂಶಗಳನ್ನು ಸಿದ್ಧಗೊಳಿಸುವುದಕ್ಕೆ ಒಂದು ತಂಡವನ್ನು ರಚಿಸಿದರು ಮತ್ತು ಅದರ ಸಾರಾಂಶವನ್ನು ಹುಝೂರ್ ಅವರಿಗೆ ಬರೆಯಲಾಗುತ್ತಿತ್ತು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಈ ಬಗ್ಗೆ ಬಹಳ ಸಂತೋಷವನ್ನು ವ್ಯಕ್ತಪಡಿಸಿದರು. ಅವರು ಪವಿತ್ರ ಖುರ್‌ಆನಿನ ಬಹಳ ಸೇವೆ ಮಾಡಿದರು. ಖಾದಿಯಾನಿನ 250 ಮಕ್ಕಳಿಗೆ ಪವಿತ್ರ ಖುರ್‌ಆನ್ ಕಲಿಸಿದರು. ಶಾಲಾ ಬಾಲಕಿಯರು ಬೆಳಗ್ಗೆ ಖುರ್‌ಆನ್‌ನ ಪಠಣಕ್ಕೆ ಬರುತ್ತಿದ್ದರು ಮತ್ತೆ ಮಧ್ಯಾಹ್ನ ಮತ್ತೆ ಸಂಜೆ ಹೊತ್ತು ಬರುತ್ತಿದ್ದರು. ಗುಂಪು ಗುಂಪಾಗಿಯೂ ಬರುತ್ತಿದ್ದರು. ಭಾರತದಲ್ಲಿ ಎಫ್.ಎ. ಇತ್ಯಾದಿಗಳನ್ನು ಮಾಡಿದ ಹೆಣ್ಣುಮಕ್ಕಳು ಮೂರು ತಿಂಗಳಿಗೆ ಖಾದಿಯಾನಿಗೆ ಬಂದು ತಂಗುತ್ತಿದ್ದರು. ಅವರು ಆ ಮಕ್ಕಳಿಗೆ ಪವಿತ್ರ ಖುರ್‌ಆನಿನ ತರ್ಜುಮೆ ಕಲಿಸುತ್ತಿದ್ದರು ಎಂದು ಅವರ ಮಗಳು ಹೇಳುತ್ತಾರೆ.

ಅವರು ಲಜ್ನವನ್ನು ಬಹಳ ಪರಿಶ್ರಮದಿಂದ ವ್ಯವಸ್ಥಾಪಿತಗೊಳಿಸಿದರು. ಅವರು ಬಹಳ ಕಷ್ಟಪಟ್ಟು ಕೆಲಸವನ್ನು ಕಲಿಸಿದರು. ಖಿಲಾಫತ್ ಜೊತೆಗಿನ ಸಂಬಂಧದ ಘಟನೆಗಳನ್ನು ವಿವರಿಸುತ್ತಿದ್ದರು. ಅದರಿಂದಾಗಿ, ಹುಡುಗಿಯರು ಮತ್ತು ಮಹಿಳೆಯರೊಂದಿಗೆ ಖಿಲಾಫತ್ ಸಂಪರ್ಕವು ಹೆಚ್ಚಾಯಿತು. ಅತಿಥಿ ಸತ್ಕಾರದ ಅಸಾಧಾರಣವಾದ ಗುಣ ಅವರಿಗೆ ಇತ್ತು. ಅವರು ಮಗಳು ಹೇಳುತ್ತಾರೆ: ಅವರು ನಮ್ಮ ತಂದೆಗೆ ಬಹಳ ಸಹಾಯಿಯಾಗಿ ಇದ್ದರು. ಬಹಳ ಬಡತನದ ಸ್ಥಿತಿಯಾಗಿತ್ತು. ಮಧ್ಯಾಹ್ನ ಕೇವಲ ಹೆಸರು ಕಾಳಿನ ಬೇಳೆ ಇರುತ್ತಿತ್ತು. ತಂದೆಯವರು ಹಾಲು ಮೊಸರಿಗಾಗಿ ಒಂದು ಎಮ್ಮೆಯನ್ನು ಸಾಕಿಕೊಂಡಿದ್ದರು. ಅತಿಥಿಗಳು ಬಂದರೆ ಇದ್ದದ್ದನ್ನು ಔಪಚಾರಿಕತೆ ತೋರಿಸದೇ ಮುಂದಿರಿಸುತ್ತಿದ್ದರು. ಋತುಮಾನಕ್ಕನುಗುಣವಾಗಿ ಬಂದ ಅತಿಥಿಗೆ ತಂಪು ಪಾನೀಯ ಮತ್ತು ಚಹಾವನ್ನೂ ನೀಡುತ್ತಿದ್ದರು. ನಂತರ ಪರಿಸ್ಥಿತಿ ಉತ್ತಮವಾದಾಗ ಅದೇ ರೀತಿ ಊಟವು ಸಹ ಬಡಿಸುತ್ತಿದ್ದರು. ಮತ್ತು ಜನರು ತಮ್ಮ ಮನೆಯಂತೆ ಅವರ ಬಳಿಗೆ ಬರುತ್ತಿದ್ದರು. ಅವರು ಉತ್ತಮ ಪತ್ನಿಯಾಗಿದ್ದರು, ಕಷ್ಟತೆಯ ಸ್ಥಿತಿಯಲ್ಲಿ ಜೊತೆಗೆ ಇರುವವರಾಗಿದ್ದರು. ಅವರು ಯಾವುದೇ ಬೇಡಿಕೆಗಳನ್ನು ಇರಿಸುತ್ತಿರಲಿಲ್ಲ. ಲಭಿಸಿದ್ದರಲ್ಲೇ ಸಂತೋಷದಿಂದ ಜೀವನ ಸಾಗಿಸುತ್ತಿದ್ದರು. ಶುಚಿತ್ವವನ್ನು ಇಷ್ಟಪಡುತ್ತಿದ್ದ ಮತ್ತು ಬಹಳ ಚೊಕ್ಕಟಾಗಿ ಇರುತ್ತಿದ್ದ ಮಹಿಳೆಯಾಗಿದ್ದರು. ಅವರ ಪುತ್ರಿ ಹೇಳುತ್ತಾರೆ, ಮಿರ್ಝಾ ವಸೀಮ್ ಅಹ್ಮದ್ ಸಾಹಿಬ್ ಅವರು ಮರಣಹೊಂದಿದಾಗ, ಅವರು ಒಂದು ಕನಸ್ಸು ಕಂಡರು ಅದರಲ್ಲಿ ಅವರು ತಮ್ಮ ಕೊನೆಯ ಪ್ರಯಾಣಕ್ಕೆ ಹೋಗುತ್ತಿದ್ದಾರೆ, ಅದಕ್ಕೆ ಅವರೂ ಸಹ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ ಅಷ್ಟರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ರವರು ಅವರಿಗೆ ಹೇಳಿದರು ನೀವು ಹೋಗುತ್ತಿಲ್ಲ ನಿಮಗೆ ವೀಝಾ ಸಿಗಲಿಲ್ಲ. ಹೀಗೆ ಅವರು ಅಲ್ಲಾಹನ ಅನುಗ್ರಹದಿಂದ ಈ ಕನಸ್ಸಿನ ನಂತರ ಒಂದು ಸುದೀರ್ಘಾಯುಷ್ಯ ಪಡೆದರು.

2007 ರಲ್ಲಿ, ಮಿರ್ಝಾ ವಸೀಮ್ ಅಹ್ಮದ್ ಸಾಹಿಬ್ ಅನಾರೋಗ್ಯಕ್ಕೆ ಒಳಗಾದಾಗ ಮತ್ತು ಸರ್ವಶಕ್ತನಾದ ಅಲ್ಲಾಹನು ಅವರನ್ನು ಗುಣಪಡಿಸಿದಾಗ, ವಾಸಿಯಾದ ನಂತರ, ಅವರು ಹೈದರಾಬಾದ್ ಜಮಾಅತ್‌ಗಳಿಗೆ ಭೇಟಿ ನೀಡುವ ಕಾರ್ಯಕ್ರಮವನ್ನು ಮಾಡಿದರು ಮತ್ತು ಅವರ ಪತ್ನಿಯನ್ನು ಸಹ ತಮ್ಮೊಂದಿಗೆ ಕರೆದೊಯ್ದರು. ಅಲ್ಲಿ, ಅಮತುಲ್ ಖುದ್ದೂಸ್ ಸಾಹಿಬಾ ಒಂದು ಕನಸನ್ನು ಕಂಡರು. ಮುಂಝಿರ್ (ಎಚ್ಚರಿಕೆ ನೀಡುವ) ಕನಸಾಗಿತ್ತು ಭಯಭೀತರಾದರು. ಅದು ಮಿರ್ಝಾ ವಸೀಮ್ ಅಹ್ಮದ್ ಸಾಹಿಬ್ ಅವರ

ಕೊನೆಯ ಸಮಯ ಆಗಿರಬಹುದು ಎಂದು ಅವರು ಭಯಭೀತರಾದರು. ಆಗ ಅವರು ಆ ಸಮಯದಲ್ಲಿ ಆರೋಗ್ಯವಾಗಿದ್ದರು, ಆದರೆ ನಂತರ ಅವರು ಖಾದಿಯಾನ್‌ಗೆ ಹಿಂತಿರುಗಲು ಒತ್ತಾಯಿಸಿದರು. ಖಾದಿಯಾನ್‌ಗೆ ಬಂದ ತಕ್ಷಣ ಮತ್ತೆ ಅವರು ಅನಾರೋಗ್ಯಕ್ಕೆ ತುತ್ತಾಗಿ ಅದೇ ಕಾಯಿಲೆಯಿಂದ ಮರಣ ಹೊಂದಿದರು.

ಇಳಿ ವಯಸ್ಸಿನಲ್ಲಿ ಅವರ ಕಣ್ಣಿನ ದೃಷ್ಟಿ ಹೋಗಿಬಿಟ್ಟಿತ್ತು. ಉಪಕರಣಗಳ ಮೂಲಕ ಬಹಳ ಕಷ್ಟದಿಂದ ಆಲಿಸಬಹುದಾಗಿತ್ತು. ಹೀಗಿದ್ದರೂ ಬಹಳ ಸಂತೋಷದಿಂದ ಜೀವನ ಸಾಗಿಸಿದರು. ಕ್ಷೇಮ ವಿಚಾರಿಸುವಾಗ, ಯಾವಾಗಲೂ ಅಲ್‌ಹಮ್ದುಲಿಲ್ಲಾಹ್ ಎಂದು ಹೇಳುತ್ತಿದ್ದರು. ಖ಼ಲೀಫತುಲ್ ಮಸೀಹ್‌ರ ಕಡೆಯಿಂದ ಯಾವುದೇ ಯೋಜನೆಯ ಆಹ್ವಾನ ಬಂದರೂ ಖಾದಿಯಾನಿನ ಮೊದಲ ಚಂದಾ ಮಿರ್ಝ಼ಾ ವಸೀಂ ಅಹ್ಮದ್ ಸಾಹಿಬ್ ಮತ್ತು ಅವರ ಪತ್ನಿಯ ಕಡೆಯಿಂದ ಬರುತ್ತಿತ್ತು. ಅವರ ಪುತ್ರಿ ಹೇಳುತ್ತಾರೆ: ನಾವು ಪವಿತ್ರ ಖುರ್‌ಆನನ್ನು ತಪ್ಪಾಗಿ ಓದಿದರೆ, ನಮ್ಮ ತಾಯಿ ಬೇರೆ ಕೊಠಡಿಯಲ್ಲಿ ಇದ್ದರೂ ಕೂಡ ಅಲ್ಲಿಂದಲೇ ಸರಿಪಡಿಸುತ್ತಿದ್ದರು. ಅವರಿಗೆ ಪವಿತ್ರ ಖುರ್‌ಆನ್ ಕಂಠಪಾಠವಿದೆ ಎಂದು ನಮಗೆ ಅನಿಸುತ್ತಿತ್ತು. ಕಂಠಪಾಠ ಮಾಡದಿದ್ದರೂ ಪದೇ ಪದೇ ಖುರ್‌ಆನ್ ಪಠಣ ಮಾಡುವುದರಿಂದ ಅವರಿಗೆ ಖುರ್‌ಆನ್ ನೆನಪಾದಂತಿತ್ತು. ಮಿರ್ಝಾ ವಸೀಮ್ ಅಹ್ಮದ್ ಸಾಹಿಬ್ ಇಅ್‌ತಿಕಾಫ್‌ಗೆ ಕುಳಿತುಕೊಳ್ಳುತ್ತಿದ್ದರು. ಅವರಿಗೆ ಊಟ ಕಳುಹಿಸಿದರೆ ಅವರೊಂದಿಗೆ ಬಡ ಮುತಕಿಫೀನ್‌ಗಳಿಗೂ ಊಟ ಕಳುಹಿಸುತ್ತಿದ್ದರು. ಅದೇ ರೀತಿ ಬೋರ್ಡಿಂಗ್ ಶಾಲೆಯಲ್ಲಿನ ಹುಡುಗರಿಗೆ ಮತ್ತು ಮುಅಲ್ಲಿಮೀನ್‌ಗಳಿಗೂ ಆಹಾರವನ್ನು ಕಳುಹಿಸುತ್ತಿದ್ದರು. ಅದೇ ರೀತಿ ಅನಾರೋಗ್ಯ, ಜ್ವರ ಬಂದರೂ ಏನೇ ಆಗಲಿ ಸುಖ ದುಃಖದಲ್ಲಿ ಎಲ್ಲೋ ಹೋಗಬೇಕಾದರೆ ಹೋಗಲೇ ಬೇಕು ಎನ್ನುವಷ್ಟು ಕಾಳಜಿ ಜನರಿಗೋಸ್ಕರ ಇತ್ತು. ಖಾದಿಯಾನ್‌ನಲ್ಲಿ ವಿವಿಧ ವರ್ಗದ ಜನರಿದ್ದರು, ಅವರ ಹುಡುಗಿಯರಿಗೆ ಹೊಲಿಗೆ ಕಲಿಸುತ್ತಿದ್ದರು. ಎಲ್ಲರೊಂದಿಗೆ ಬೆರೆಯುವ ಸಂಸ್ಕೃತಿ ನಿರ್ಮಾಣಮಾಡಿಕೊಂಡಿದ್ದರು. 2005 ರಲ್ಲಿ, ಲಜ್ನಾ ಇಮಾಅಲ್ಲಾಹ್ ರಬ್ವಾದಲ್ಲಿ ಸರಾಯ್ ಮಸ್ರೂರ್ ಅನ್ನು ನಿರ್ಮಿಸಿದ್ದಾರೆ, ಅದು ಉತ್ತಮವಾದ ದೊಡ್ಡ ಕಟ್ಟಡವಾಗಿದೆ, ಅಲ್ಲಿಯೂ ಸಹ ತನ್ನ ಸ್ವಂತ ಕಡೆಯಿಂದ ಚಂದ ನೀಡುವ ಬದಲು, ಅವರು ತನ್ನ ಪತಿಯ ಕಡೆಯಿಂದ ಒಂದು ಲಕ್ಷ ರೂಪಾಯಿಗಳನ್ನು ಚಂದ ನೀಡಿದ್ದರು.

ವಿಭಜನೆಯ ನಂತರ, ಹಝ್ರತ್ ಅಮ್ಮಾ ಜಾನ್(ರ) ಅವರು ರತ್ತನ್ ಬಾಗ್ ಲಾಹೋರ್‌ನಲ್ಲಿ ಮತ್ತು ರಬ್ವಾದಲ್ಲಿನ ಮನೆಗಳಲ್ಲಿ ಪವಿತ್ರ ಖುರ್‌ಆನ್ ಅನ್ನು ಪಠಿಸುತ್ತಿದ್ದರು ಮತ್ತು ಅದೇ ರೀತಿ ಅಮ್ಮಾ ಜಾನ್ ಸಾಹಿಬ ಅವರು ಇನ್ನೊಬ್ಬರಿಂದ ಮಲ್‌ಫೂಝಾತ್‌ಗಳನ್ನು ಸಹ ಆಲಿಸುತ್ತಿದ್ದರು ಎಂದು ಅವರು ಹೇಳುತ್ತಾರೆ.

ಅವರ ಕಿರಿಯ ಮಗಳು ಅಮತುಲ್ ರವೂಫ್ ಹೇಳೂತ್ತಾರೆ: ಬೈತುರ್ರಿಯಾಝುತ್‌ನಲ್ಲಿ ಷಾಹ್ ಜೀ ಮತ್ತು ಕೆಂಪು ಚಿಮುಕಿನ ಕೊಠಡಿ (ಸುರ್ಖ್ ಛೀಂಟೋ ವಾಲೆ ಕಮ್ರ) ಅತ್ತರ್ ದೀನ್ ಸಾಹಿಬ್ ಮತ್ತು ಹಝ್ರತ್ ಅಮ್ಮಾ ಜಾನ್(ರ) ರವರ ದೊಡ್ಡ ಕೊಠಡಿಯಲ್ಲಿ ಹಾಫಝ್ ಸಾಹಿಬ್ ತಂಗಿದ್ದರು. ಅವರು ಮೂರು ಜನರಿದ್ದರು. ನಂತರ ಭಾಯಿ ಅಬ್ದುಲ್ ರಹೀಮ್ ಸಾಹೇಬರೂ ಇಲ್ಲಿಯೇ ತಂಗುತ್ತಿದ್ದರು. ಅವರು ಹೇಳುತ್ತಾರೆ ಮನೆಯಲ್ಲಿ ಏನೇ ಅಡುಗೆ ಮಾಡಿದರೂ ಅವರೆಲ್ಲರಿಗೂ ಕಳುಹಿಸಲಾಗುತ್ತಿತ್ತು ಮತ್ತು ಬೈತುದ್ದುಆನಲ್ಲಿ ಮಹಿಳೆಯರ ಭೇಟಿ ನೀಡುವ ಸಮಯದಲ್ಲಿ ಮಹಿಳೆಯರು ಬೈತುದ್ದುಆಗೆ ಭೇಟಿ ನೀಡಿದ ನಂತರ ಮಹಿಳೆಯರು ಮಸೆಗೆ ಬರುತ್ತಿದ್ದರು. ಮನೆಯ ಬಾಗಿಲು ಎಲ್ಲಾ ಸಮಯದಲ್ಲೂ ತೆರೆದಿರುತ್ತಿತ್ತು. ಯಾವುದೇ ನಿರ್ಬಂಧಗಳಿರುತ್ತಿರಲಿಲ್ಲ, ಯಾವುದೇ ಬೆಲ್ ಕೂಡ ಇರುತ್ತಿರಲಿಲ್ಲ. ಮಹಿಳೆಯರು ಆರಾಮವಾಗಿ ಪ್ರವೇಶಿಸುತ್ತಿದ್ದರು. ಮಿರ್ಝಾ ವಸೀಮ್ ಅಹ್ಮದ್ ಸಾಹಿಬ್ ನಿಧನರಾದಾಗ ಮತ್ತು ಇನಾಮ್ ಘೋರಿ ಸಾಹಿಬ್ ನಾಝಿರ್ ಅಅ್‌ಲಾವಾದಾಗ, ನಮ್ಮ ತಾಯಿಯವರು ಅವರಿಗೆ ಸಂಪೂರ್ಣ ವಿಧೇಯತೆಯನ್ನು ತೋರಿಸಿದರು ಮತ್ತು ಪ್ರತಿ ಕೆಲಸಕ್ಕೆ ನಿರ್ದಿಷ್ಟ ರೀತಿಯಲ್ಲಿ ಅರ್ಜಿ ಸಲ್ಲಿಸುತ್ತಿದ್ದರು ಎಂದು ಅವಳು ಹೇಳುತ್ತಾರೆ. ಅವರು ತಮ್ಮ ಜೀವಿತಾವಧಿಯಲ್ಲಿ ತಮ್ಮ ವಸಿಯ್ಯತ್‌ನ ಚಂದ ಹಾಗೂ ಆಸ್ತಿಯ ಭಾಗವನ್ನು ಪಾವತಿಸಿದರು ಮತ್ತು ತೆಹ್ರೀಕ್-ಎ-ಜದೀದ್‌ನ ಮೊದಲ ಕಚೇರಿಯಲ್ಲಿ ಸೇರಿದ್ದರು. ನಂತರ ಅವರು ತಮ್ಮ ಹೆಣ್ಣುಮಕ್ಕಳು ಮತ್ತು ಮಕ್ಕಳಿಗೆ ನಮಾಝುನ್ನು ಪ್ರಾರಂಭಕಾಲದಲ್ಲಿಯೇ ನಿರ್ವಹಿಸಲು ಸಲಹೆ ನೀಡುತ್ತಿದ್ದರು ಏಕೆಂದರೆ ಅದು ಮೊದಲನೆಯದು ನಮಾಝ್ ಬಗ್ಗೆ ಲೆಕ್ಕ ಪರಿಶೀಲನೆ ತೆಗೆದುಕೊಳ್ಳಲಾಗುವುದು. ಆ ಖಾತೆ ಸ್ಪಷ್ಟವಾಗಿದ್ದರೆ, ಎಲ್ಲವೂ ಸ್ಪಷ್ಟವಾಗಿರುತ್ತದೆ.

ನಂತರ ಅವರು ಹಲವಾರು ಹುಡುಗಿಯರನ್ನು ನಿರಂತರವಾಗಿ ಬೆಳೆಸಿದರು ಎಂದು ಅವರು ಹೇಳುತ್ತಾರೆ. ಅವರನ್ನು ಉತ್ತಮ ರೀತಿಯಲ್ಲಿ ಬೆಳೆಸಿದ್ದಲ್ಲದೆ, ಅವರಿಗೆ ತರಬೇತಿ ನೀಡಿ, ಮೊದಲು ಅವರಿಗೆ ಖುರ್‌ಆನ್‌ನ ಪಠಣವನ್ನು ಕಲಿಸಿ, ನಂತರ ಭಾಷಾಂತರವನ್ನು ಕಲಿಸಿ, ನಂತರ ಅವರ ಮದುವೆಯನ್ನು ಏರ್ಪಡಿಸಿದರು. ಬಿಹಾರದ ರಾಂಚಿಯ ವ್ಯಕ್ತಿಯೊಬ್ಬ ತನ್ನ ಮಗಳೊಂದಿಗೆ ಅಹ್ಮದಿಯಾದರು. ಅವರಿಗೆ ತುಂಬಾ ವಯಸ್ಸಾಗಿತ್ತು. ಮಗಳನ್ನು ನಮ್ಮ ತಾಯಿಯ ಬಳಿಗೆ ಕರೆತಂದು ಅವರು ಹೇಳಿದರು: ನಾನು ಎಷ್ಟು ದಿನ ಬದುಕುತ್ತೇನೆ ಎಂದು ತಿಳಿದಿಲ್ಲ, ನನ್ನ ನಂತರ, ಈ ಹುಡುಗಿಯ ಸಹೋದರರು ಅವಳನ್ನು ಕೊಲ್ಲುತ್ತಾರೆ, ಆದ್ದರಿಂದ ಇವಳನ್ನು ಉಳಿಸಿಕೊಳ್ಳಿ. ಆ ಸಮಯದಲ್ಲಿ, ಹುಡುಗಿಗೆ ಸುಮಾರು ಇಪ್ಪತ್ತೈದು ವರ್ಷವಾಗಿತ್ತು. ನನ್ನ ತಾಯಿ ಆ ಹುಡುಗಿಗೆ ಆ ವಯಸ್ಸಿನಲ್ಲಿ ಪವಿತ್ರ ಖುರ್‌ಆನ್ ನಝಿರ ಕಲಿಸಿದರು ಮತ್ತು ನಂತರ ಭಾಷಾಂತರ ಕಲಿಸಿದರು. ಆಗ ಅವರು ಭಾಷೆ ತಿಳಿದಿಲ್ಲದಿದ್ದರೂ ಮತ್ತು ಅನಕ್ಷರಸ್ಥರಾಗಿದ್ದರು. ನಂತರ ಅವಳನ್ನು ಮದುವೆಯೂ ಮಡಿಕೊಟ್ಟರು.

ದರ್ವೇಶಿ ಕಾಲದಲ್ಲಿ ಆರ್ಥಿಕ ಪರಿಸ್ಥಿತಿಗಳು ಕೆಟ್ಟದಾಗಿತ್ತು. ಯಾವುದಾದರು ದರ್ವೇಶ್‌ನ ಮಗಳು ಮದುವೆಯಾದಾಗ, ಅವರು ತಮ್ಮ ಆಭರಣಗಳನ್ನು ಅವಳಿಗೆ ನೀಡಿ, ನೀನು ಇಷ್ಟ ಪಡುವವರೆಗೂ ಧರಿಸಿ ಮತ್ತು ನಂತರ ಅದನ್ನು ಹಿಂತಿರುಗಿಸು ಎಂದು ಹೇಳುತ್ತಿದ್ದರು. ನಂತರ, ಮುಂದಿನ ದರ್ವೇಶ್ ಮದುವೆಯಾದರೆ, ಅದನ್ನು ಅವನಿಗೆ ನೀಡುತ್ತಿದ್ದರು. ಈ ರೀತಿಯಾಗಿ, ನಿಮ್ಮ ಆಭರಣಗಳಿಂದ ಅನೇಕ ಹುಡುಗಿಯರು ಪ್ರಯೋಜನ ಪಡೆದರು, ಏಕೆಂದರೆ ದರ್ವೇಶ್‌ಗಳ ಆರಂಭಿಕ ದಿನಗಳಲ್ಲಿ ದರ್ವೇಶ್‌ಗಳ ಪರಿಸ್ಥಿತಿಗಳು ಉತ್ತಮವಾಗಿರುತ್ತಿರಲಿಲ್ಲ, ಆದರೆ ನಂತರ ಅವರ ಮಕ್ಕಳು ಹೊರಬಂದಾಗ, ಹಣ ಬರಲಾರಂಭಿಸಿತು. ಮಕ್ಕಳು ಬೆಳೆದು ದುಡಿಯಲು ಆರಂಭಿಸಿದಾಗ ಆ ಕಾಲದಲ್ಲಿ ಏನೆಲ್ಲ ಉಳಿತಾಯವಿದ್ದರೂ ತಮ್ಮ ಮನೆಯನ್ನು ಅಸುರಕ್ಷಿತವೆಂದು ಪರಿಗಣಿಸಿ ಅಮನತ್ತಿನಂತೆ ನಮ್ಮ ತಾಯಿಯ ಬಳಿ ಇರಿಸುತ್ತಿದ್ದರು. ಅವರು ಹೇಳುತ್ತಾರೆ: ನನಗೆ ನೆನಪಿದೆ ನನ್ನ ತಾಯಿ ಎಲ್ಲರ ಅಮಾನತ್ತುಗಳನ್ನು ಬಹಳ ಸೂಕ್ಷದಿಂದ ತಮ್ಮ ಬಿರುವಿನಲ್ಲಿ ಇರಿಸುತ್ತಿದ್ದರು. ಕೆಲವರ ಒಡವೆಗಳಿರುತ್ತಿದ್ದವು, ಕೆಲವರ ಹಣವಿರುತ್ತಿತ್ತು, ಹೀಗೆ ಹಲವಾರು ಅಮಾಬತ್‌ಗಳಿರುತ್ತಿದ್ದವು. ಅವರ ಬಳಿ ಯಾರ ಅಮಾನತ್ ಇರುತ್ತಿತ್ತು ಆತನು ಬಂದು ಅವರಲ್ಲಿ ಅಮಾನತ್ ಹಿಂದಿರುಗಿಸಲು ವಿನಂತಿಸಿಕೊಂಡಾಗ ಅವರು ನನಗೆ ಆ ಅಮಾನತ್ ಅನ್ನು ತೆಗೆದುಕೊಂಡು ಬರಲು ಹೇಳುತ್ತಿದ್ದರು. ಹೀಗೆ ಯಾರ ಅಮಾನತ್ ಇರುತ್ತಿತ್ತು ಅವರಿಗೆ ಆ ಅಮಾನತ್ ತೆಗೆದುಕೊಂಡು ಹೊರಡುವ ಮುಂಚೆ ಅವರ ಮುಂದೆ ತೆರೆದು ಪರಿಶೀಲಿಸಿಕೊಳ್ಳಲು ಹೇಳುತ್ತಿದ್ದರು. ಅವರು ಅದನ್ನು ಪರಿಶೀಲಿಸಿ ಎಲ್ಲಾ ಸರಿ ಎಂದು ಹೇಳಿದರೆ ಅವರಿಗೆ ತೃಪ್ತಿಯಾಗುತ್ತಿತ್ತು. ಆದಾಗ್ಯೂ ಆ ಕಾಲದಲ್ಲಿ ಬಹಳ ಬಡತನವಿತ್ತು. ಅದರೆ ಎಲ್ಲಾ ದರ್ವೇಶ್‌ಗಳು ಉತ್ತಮ ಕುಟುಂಬದವರಾಗಿದ್ದರು. ತಮ್ಮ ಹೆಣ್ಣುಮಕ್ಕಳು ಪ್ರಾಥಮಿಕ ಶಿಕ್ಷಣ ಪಡೆದು ಮುಂದೆ ತಮ್ಮ ಓದು ಮುಂದುವರಿಸುತ್ತಿದ್ದರೆ ಸರಿ ಇಲ್ಲವಾದರೆ, ಅವರನ್ನು ಕಚೇರಿಗೆ ಕರೆಸಿ, ಲಜ್ನಾದ ಕೆಲಸವನ್ನು ಮಾಡಿಸುತ್ತಿದ್ದರು ಕೂರದಂತೆ ನೋಡಿಕೊಳ್ಳುತ್ತಿದ್ದರು. ಮದುವೆಯದವರೆಗೆ ಲಜ್ನಾದ ಕೆಲಸ ಮಾಡಬೇಕಾಗಿತ್ತು. ಆಗ ನಿಯಮಿತವಾಗಿ ಆಫೀಸ್ ಇರಲಿಲ್ಲ, ಯಾರೂ ಇಲ್ಲದ ಕಾರಣ ಮನೆಯಲ್ಲೇ ಚಿಕ್ಕ ಆಫೀಸ್ ಕಟ್ಟಿ ಅದರಲ್ಲಿ ಶಾಲೆಯ ಕೆಲಸವೂ ನಡೆಯುತ್ತಿತ್ತು. ವಿಪರೀತ ರಶ್ ಇದ್ದರೂ ಎಲ್ಲ ಕೆಲಸವನ್ನೂ ಖುಷಿಯಿಂದ ಮಾಡುತ್ತಿದ್ದರು, ಆಗ ಕೆಲಸಕ್ಕೆ ಬಂದ ಹುಡುಗಿಯರೆಲ್ಲರಿಗೂ ಊಟೋಪಚಾರ ಕೂಡ ಮಾಡುತ್ತಿದ್ದರು. ಊಟದ ಸಮಯವಾದರೆ, ಊಟವಿಲ್ಲದಿದ್ದರೆ ಚಹಾ ಇತ್ಯಾದಿಗಳನ್ನು ನೀಡುತ್ತಿದ್ದರು. ಅದೇ ರೀತಿ ಈ ಹುಡುಗಿಯರಿಗೆ ಊಟದ ಟೇಬಲ್ ಹಾಕುವುದನ್ನು ಹೇಳಿಕೊಡುತ್ತಿದ್ದರು ಹೀಗೆ ಕೆಲವರಿಗೆ ಹೇಳುತ್ತಿದ್ದರು "ಇವತ್ತೇ ಕಲಿತುಕೊಳ್ಳಿ, ಏಕೆಂದರೆ ಒಳ್ಳೆಯ ಮನೆತನಗಳಲ್ಲಿ ಸಂಬಂಧವಾದಾಗ ಅವರು ನಿಮಗೆ ಅಜ್ಞಾನಿ ಎಂದು ಹೇಳಬಾರದು." ಹುಡುಗಿಯರ ಬಗ್ಗೆ ತುಂಬಾ ಚಿಂತೆ ಇತ್ತು ಮತ್ತು ಅನೇಕ ಹುಡುಗಿಯರು ಒಳ್ಳೆಯ ಮನೆಗಳಲ್ಲಿ ಮದುವೆಯಾದಾಗ, ಅವರ ತರಬೇತಿಯಿಂದ ಯಾವುದೇ ಸಮಸ್ಯೆ ಎದುರಿಸಲಿಲ್ಲ. ಅನೇಕ ಮಹಿಳೆಯರು, ಹುಡುಗಿಯರು ನಾವು ಅವರಿಂದ ಈ ರೀತಿ ತರಬೇತಿ ಪಡೆದಿದ್ದೇವೆ ಎಂದರೆ ನಮಗೆ ಮಾವನ ಮನೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಯಾವುದೇ ತೊಂದರೆಯನ್ನು ಎದುರಿಸಲಿಲ್ಲ ಎಂದು ಉಲ್ಲೇಖಿಸಿದ್ದಾರೆ. ಅಂತೆಯೇ, ಅನೇಕ ಹುಡುಗಿಯರ ವರದಕ್ಷಿಣೆಯನ್ನು (ಜೆಹೆಝ್) ಅವರ ಕೈಯಿಂದಲೇ ಮಾಡಲಾಗುತ್ತಿತ್ತು.

ಈದ್ ದಿನದಂದು, ಈದಿ ನೀಡಲು ದರ್ವೇಶ್‌ಗಳು ವಿಧವೆಯರ ಮನೆಗೆ ತಾವು ಸ್ವತಃ ಹೋಗುತ್ತಿದ್ದರು. ಮಿರ್ಝಾ ವಸೀಮ್ ಅಹ್ಮದ್ ಸಾಹಿಬ್ ಕೂಡ ಅವರೊಂದಿಗೆ ಇರುತ್ತಿದ್ದರು, ಅವರು ಹೋಗದಿದ್ದರೆ, ಅವರು ಸ್ವತಃ ಒಬ್ಬರೇ ಹೋಗುತ್ತಿದ್ದರು. ಯಾರೋ ಒಬ್ಬರು ರಬ್ವಾದಲ್ಲಿ ದೊಡ್ಡ ಐಷಾರಾಮಿ ಮನೆಯನ್ನು ನಿರ್ಮಿಸಿದ್ದಾರೆ ಎಂದು ಹೇಳಿದರು,

ಅದಕ್ಕೆ ನನ್ನ ತಾಯಿ ಹೇಳಿದರು, ನಾನು ಖಾದಿಯಾನ್‌ನಲ್ಲಿ ಈ ಅನುಗ್ರಹದಾಯಕ ಮನೆಯನ್ನು ಪಡೆದಿದ್ದೇನೆ, ಅಂದರೆ ಇಲ್ಲಿ ವಾಸಿಸಲು ಸೌಭಾಗ್ಯ ಲಭಿಸಿತು ಎಂದು ಅಲ್ಲಾಹನೊಂದಿಗೆ ಹೇಳೀಕೊಂಡಿದ್ದೇನೆ. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಸೊಸೆಯಾಗಿ ಇಲ್ಲಿಗೆ ಬರುವ ಅದೃಷ್ಟ ನನಗೆ ಲಭಿಸಿದೆ, ಇದು ನನಗೆ ಬಹಳಷ್ಟು ಆಗಿದೆ. ಹೌದು, ನನಗೆ ಸ್ವರ್ಗದಲ್ಲಿ ಒಂದು ಐಷಾರಾಮಿ ಮನೆ ನೀಡು.

ಇದು ಮುಮಿನ್‌ಗಳ (ಧರ್ಮನಿಷ್ಠರ) ಮಹಿಮೆಯಾಗಿದೆ ಮತ್ತು ಪ್ರಪಂಚದ ವಿಷಯಗಳ ಬಗ್ಗೆ ಅಸಡ್ಡೆಯಾಗಿದೆ.

ಹಝ್ರತ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ) ಅವರ ಬಗ್ಗೆ ಅವರು ಬರೆದಿದ್ದಾರೆ, ನಾನು ಬಾಲ್ಯದಿಂದಲೂ ಸ್ವಲ್ಪ ಸ್ವಚ್ಛತೆ ಇಷ್ಟಪಡುವವಳಾಗಿದ್ದರಿಂದ ಮೀರ್ ಸಾಹಿಬ್ ತನ್ನ ಕೋಣೆಯನ್ನು ಸ್ವಚ್ಛಗೊಳಿಸಲು ಯಾರಿಗೂ ಅವಕಾಶ ನೀಡುತ್ತಿರಲಿಲ್ಲ. ಪುಸ್ತಕಗಳು, ಕಾಗದ, ಅಲ್ಲಿ ಏನು ಬಿದ್ದಿದ್ದರೂ ಅವರು ಅದನ್ನು ಸ್ವಚ್ಛಗೊಳಿಸಿ ಮತ್ತೆ ಅದರ ಜಾಗಕ್ಕೆ ಇರಿಸುತ್ತಿದ್ದರು. ಮತ್ತು ಅದಕ್ಕಾಗಿಯೇ ಅಮತುಲ್ ಖುದ್ದೂಸ್ ಸಾಹಿಬ ಅವರಿಗೆ ಹೊರತುಪಡಿಸಿ ಯಾರೂ ನನ್ನ ಕೋಣೆಗೆ ಬರಬಾರದು ಎಂದು ಹೇಳುತ್ತಿದ್ದರು.

ಕೆಲವು ಹುಡುಗಿಯರು ಅಬ್ದುಲ್ ರೆಹಮಾನ್ ಜಟ್ ಸಾಹಿಬ್ ಅವರಿಂದ ಪವಿತ್ರ ಖುರ್‌ಆನ್ ಅನ್ನು ಓದಿದ್ದಾರೆ. ಆಗ 10 ನೇ ಪರೀಕ್ಷೆಯನ್ನು ಬರೆಯುವ ಹುಡುಗಿ ಪವಿತ್ರ ಖುರ್‌ಆನ್‌ನ ಅನುವಾದವನ್ನು ಓದಲು ಪ್ರಾರಂಭಿಸಿದ್ದೀರಾ ಎಂದು ಕೇಳುತ್ತಿದ್ದರು. 10ನೇ ತರಗತಿ ಉತ್ತೀರ್ಣರಾದ ಹುಡುಗಿಯರು ನಮ್ಮ ತಾಯಿಯ ಬಳಿ ಬಂದು ಅನುವಾದ ಓದುತ್ತಿದ್ದರು ಎನ್ನುತ್ತಾರೆ. ಒಂದು ಸಮಯದಲ್ಲಿ ಮೂರು ತರಗತಿಗಳು ನಡೆಯುತ್ತಿದ್ದವು ಮತ್ತು ಮೂರು ವರ್ಷಗಳಲ್ಲಿ ಅವರಿಗೆ ಪವಿತ್ರ ಖುರ್‌ಆನ್ ಮತ್ತು ವ್ಯಾಕರಣದ ಸಂಪೂರ್ಣ ಅನುವಾದವನ್ನು ಕಲಿಸಲಾಗುತ್ತಿತ್ತು. ಅನೇಕ ಜನರು, ಹುಡುಗಿಯರು, ಮಹಿಳೆಯರು, ಅವರು ನಮಗೆ ನ್ಯಾಯಶಾಸ್ತ್ರ (ಫಿಖಹ್) ಇತ್ಯಾದಿಗಳನ್ನು ಕಲಿಸುತ್ತಿದ್ದರು ಎಂದು ನನಗೆ ಬರೆದಿದ್ದಾರೆ.

ಪವಿತ್ರ ಖುರ್‌ಆನ್ ಪೂರ್ಣಗೊಳಿಸಲು ಅವಶ್ಯವಾಗಿ ಹೇಳಲಾಘುತ್ತಿತ್ತು. ಯಾವುದೇ ಹುಡುಗಿ ಪವಿತ್ರ ಖುರ್‌ಆನ್ ಅನ್ನು ಮುಗಿಸದೆ ಬಿಡಬಾರದು ಎಂಬ ಸಮರ್ಪಣೆ ಎಂದು ಹೇಳಿಬಹುದು. ಅವರು ತಹಜ್ಜುದ್ ನವಾಝುನ್ನು ನಿಯಮಿತವಾಗಿ ನಿರ್ವಹಿಸುತ್ತಿದ್ದರು. ಕೊನೆಯ ಅನಾರೋಗ್ಯದ ಸಮಯದಲ್ಲಿ ಅವರು ತುಂಬಾ ಅನಾರೋಗ್ಯಕ್ಕೆ ಒಳಗಾದಾಗಲೂ, ಅವರು ತಹಜ್ಜುದ್ದಾಗಿ ನನ್ನನ್ನು ಎಬ್ಬಿಸಬೇಕು ಎಂಬ ಒಂದೇ ಆಲೋಚನೆಯನ್ನು ಹೊಂದಿದ್ದರು. ಉಪವಾಸ ಮಾಡುವ ಶಕ್ತಿ ಇರುವವರೆಗೆ ಉಪವಾಸವನ್ನು ಮುಂದುವರಿಸಿದರು. ತರಾವೀಹ್ ಗಾಗಿ ನಿತ್ಯ ಮಸೀದಿಗೆ ಹೋಗುತ್ತಿದ್ದರು. ಖಾದಿಯಾನ್‌ನಲ್ಲಿ ಉಳಿದ ದಿನಗಳಲ್ಲಿ, ಅವರು ಮನೆಯಲ್ಲಿ ಪ್ರಾರ್ಥನೆ ಮಾಡುತ್ತಿದ್ದರು, ಆದರೆ ರಂಜಾನ್ ಸಮಯದಲ್ಲಿ ಅವರು ಪ್ರಾರ್ಥನೆಗಾಗಿ ಮಸೀದಿಗೆ ಹೋಗುತ್ತಿದ್ದರು.

ಖಲೀಫರ ಬಗ್ಗೆ ಅಪಾರ ಪ್ರೀತಿ ಇತ್ತು. ಖಲೀಫಾರಿಗೆ ಪತ್ರವನ್ನು ನಿಯಮಿತವಾಗಿ ಬರೆಯುತ್ತಿದ್ದರು. ಅವರ ಪುತ್ರಿ ಬರೆಯುತ್ತಾರೆ, ಪ್ರತಿಕ್ರಿಯೆಯಲ್ಲಿ ಯಾವತ್ತಾದರೂ ಸಂತೋಷದ ಅಭಿವ್ಯಕ್ತಿಯಾಗಿದ್ದರೆ, ನೋಡು, ಇದು ಸಂತೋಷದ ಅಭಿವ್ಯಕ್ತಿ ಎಂದು ಬಹಳ ಉತ್ಸಾಹದಿಂದ ಜನರಿಗೆ ಹೇಳುತ್ತಿದ್ದರು.

1991 ರಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಭೇಟಿ ನೀಡಿದಾಗ, ಅವರು ತಮ್ಮ ಕೈಗಳಿಂದ ಎಲ್ಲಾ ಕೊಠಡಿಗಳನ್ನು ದುರಸ್ತಿ ಮಾಡಿದರು ಮತ್ತು ಮನೆಯನ್ನು ದುರಸ್ತಿ ಮಾಡಿದರು. ಅದೇ ರೀತಿ ನಾನು 2005ರಲ್ಲಿ ಭೇಟಿ ನೀಡಿದಾಗ ಆ ಸಮಯದಲ್ಲೂ ನಮ್ಮ ಕೊಠಡಿಗಳನ್ನು ದುರಸ್ತಿ ಮಾಡಿ, ಹಾಸಿಗೆಯನ್ನು ಜೋಡಿಸಿ, ಹಾಸಿಗೆಗಳನ್ನು ಹಾಯಿಸಿದರು ಮತ್ತು ಎಲ್ಲಾ ಕೆಲಸಗಳನ್ನು ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಮಾಡಿದರು. ಅದೇ ರೀತಿ ಬೇರೆಬೇರೆಯಾಗಿ ಅಡುಗೆ ಮಾಡಲಾಗುವುದು ಎಂದು ನನ್ನ ಮಾತಿಗೆ ಒತ್ತಾಯ ಮಾಡಿದರೂ ನಮ್ಮಿಂದ ದಿನಕ್ಕೆ ಒಂದೊಂದು ಊಟ ಬರಬೇಕು ಎಂದರು. ಮತ್ತು ನಿಜವಾಗಿಯೂ ಒಂದು ಭಕ್ಷ್ಯವನ್ನು ಕಳುಹಿಸುವುದನ್ನು ಮುಂದುವರಿಸಿದರು. ಮತ್ತು ಬಹಳ ಎಚ್ಚರಿಕೆಯಿಂದ ಅಡುಗೆ ಮಾಡುತ್ತಿದ್ದರು. ಅವರು ಹೇಳುತ್ತಾರೆ: ನನ್ನ ತಂದೆಯ ನಿಧನದ ನಂತರ, ನನ್ನ ತಾಯಿ ನಮಾಝ್ ನಿರ್ವಹಿಸುತ್ತಿದ್ದರು ಮತ್ತು ಅಳುತ್ತಿದ್ದರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮರಣದ ಸಮಯದಲ್ಲಿ ಹಝ್ರತ್ ಅಮ್ಮಾ ಜಾನ್ ಸಾಹಿಬ ಅವರು ಹೇಳಿದ ಅದೇ ಮಾತುಗಳನ್ನು ಹೇಳುತ್ತಿದ್ದರು, ಓ ಪ್ರಭು! ಇವರು ನಮ್ಮನ್ನು ಬಿಟ್ಟು ಹೋಗುತ್ತಿದ್ದಾರೆ, ನೀನು ನಮ್ಮನ್ನು ಬಿಡಬೇಡ. ಅವರು ಹೇಳುತ್ತಾರೆ ನಾನು ಗಮನಿಸಿದ್ದೇನೆ ಮತ್ತು ಅವರ ದುಆ ಸ್ವೀಕರಿಸಲಾಗಿದೆ ಎಂದು ನನಗೆ ಖಾತ್ರಿಯಿದೆ ಏಕೆಂದರೆ ತದನಂತರ ನಮಗೆ ವೀಸಾ ಲಭಿಸಿತು. ಎಲ್ಲಾ ಹುಡುಗಿಯರು ಮದುವೆಗೆ ಪಾಕಿಸ್ತಾನಕ್ಕೆ ಬಂದಿದ್ದರಿಂದ, ಅವರು ಬಹು ವೀಸಾಗಳನ್ನು (Multiple Visa) ಪಡೆದುಕೊಂಡರು ಮತ್ತು ಬರುವುದನ್ನು ಮತ್ತು ಹೋಗುವುದನ್ನು ಮುಂದುವರೆಸಿದರು ಮತ್ತು ಅವರಿಗೆ ತಮ್ಮ ಒಂಟಿತನದ ಅರಿವು ಆಗಲಿಲ್ಲ. ಅವರ ಬಳಿಗೆ ಹೆಣ್ಣುಮಕ್ಕಳು ಬಂದು ಹೋಗುತ್ತಿದ್ದರು.

ಅವರ ಪುತ್ರ ಹೇಳುತ್ತಾರೆ: ಹೆಚ್ಚಿನ ಅತಿಥಿಗಳು ದಾರುಲ್ ಮಸೀಹ್‌ನಲ್ಲಿ ಉಳಿದುಕೊಳ್ಳುತ್ತಿದ್ದರು ಮತ್ತು ನಮ್ಮ ತಾಯಿ 11–12 ವರ್ಷ ವಯಸ್ಸಿನ ಮಕ್ಕಳಿಗೆ ಕೊಠಡಿಗಳಿಗೆ ಬಿಸಿನೀರನ್ನು ತರುವುದು ಹೇಗೆ ಎಂದು ಸ್ವತಃ ತರಬೇತಿ ನೀಡುತ್ತಿದ್ದರು. ಅತಿಥಿಗಳ ಅಗತ್ಯಗಳನ್ನು ಅವರು ನೋಡಿಕೊಳ್ಳುತ್ತಿದ್ದರು. ಅಂತೆಯೇ, ಮಿಯಾಂ ವಸೀಮ್ ಅಹ್ಮದ್ ಸಾಹಿಬ್ ಸರ್ಕಾರಿ ಅಧಿಕಾರಿಗಳೊಂದಿಗೆ ಸಂಬಂಧವನ್ನು ಹೊಂದಿದ್ದಾಗ, ಅವರ ಪತ್ನಿಯರಿಗೂ ಸಹ ಜಮಾಅತ್‌ನ ಬಗ್ಗೆ ಪರಿಚಯಿಸುತ್ತಿದ್ದರು ಮತ್ತು ನಂತರ ಅವರೊಂದಿಗೆ ಈ ಸಂಬಂಧವನ್ನು ಉಳಿಸಿಕೊಂಡಿದ್ದರು.

ಸತ್ನಾಮ್ ಸಿಂಗ್ ಬಾಜ್ವಾ ಅಲ್ಲಿನ ಮಹಾನ್ ರಾಜಕಾರಣಿ. ವಿಭಜನೆಯಾದಾಗ ಅವರು ಪಾಕಿಸ್ತಾನದಿಂದ ಭಾರತಕ್ಕೆ ತೆರಳಿದರು. ಈಗ ಪ್ರತಾಪ್ ಸಿಂಗ್ ಬಾಜ್ವಾ ಅವರ ತಂದೆ. ಅವರು ಸಂಸದರಾಗಿದ್ದು, ಅವರ ಪತ್ನಿಯೂ ಆ ಸಮಯದಲ್ಲಿ ನಮ್ಮ ಮನೆಗೆ ಬರುತ್ತಿದ್ದರು ಎಂದು ಹೇಳಲಾಗುತ್ತದೆ ಮತ್ತು ಅವರು ನಮ್ಮ ತಾಯಿಯ ಬಳಿ ಅಮಾನತ್ತುಗಳನ್ನು ಇಡುತ್ತಿದ್ದರು. ಒಮ್ಮೆ ಅವರು ಅಮಾನತ್ ಅನ್ನು ಇರಿಸಿದರು, ನಂತರ ಅವರು ಸಾಹಿಬ್ಜಾದಿ ಅಮತುಲ್ ಖುದ್ದೂಸ್ ಸಾಹಿಬ ಅವರನ್ನು ಕೇಳಿದರು, ನೀವು ಅದನ್ನು ತೆರೆದು ನೋಡಿದ್ದೀರಾ? ಅದಕ್ಕೆ ಅವರು ಉತ್ತರಿಸಿದರು; ಇದು ನಿಮ್ಮ ಅಮಾನತ್ ಆಗಿತ್ತು ನಾನು ಅದನ್ನು ಹೇಗೆ ತೆರೆಯಲಿ? ನೀವು ಇದು ಸರಿಇದೆಯೋ ಇಲ್ಲವೋ ಎಂದು ನೋಡಿಕೊಳ್ಳಿ.

ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು.

ಒಮ್ಮೆ ಅವರು ಒರಿಸ್ಸಾದ ಹಳ್ಳಿಯೊಂದಕ್ಕೆ ಭೇಟಿ ನೀಡಿದ್ದರು ಎಂದು ಹೇಳಲಾಗುತ್ತದೆ. ಅಲ್ಲಿ ಕೆಲವರಿಗೆ ಕೊಡಲು ಏನೂ ಇರಲಿಲ್ಲ, ನಮ್ಮೊಂದಿಗೆ ಎಲ್ಲಾ ಮಕ್ಕಳೂ ಹೋಗಿದ್ದರು, ಅಲ್ಲಿನ ಜನರು ತುಂಬಾ ಕಳಪೆ ಮತ್ತು ಶಿಥಿಲಾವಸ್ಥೆಯಲ್ಲಿದ್ದ ಕಾರಣ ಮಕ್ಕಳ ಹೆಚ್ಚುವರಿ ಬಟ್ಟೆಗಳನ್ನು ಆ ಜನರಿಗೆ ಮೈ ಮುಚ್ಚಿಕೊಳ್ಳಲು ನೀಡಲಾಯಿತು ಎಂದು ಅವರು ಹೇಳುತ್ತಾರೆ. ಮತ್ತೆ ಹೇಳುತ್ತಾರೆ ನಮ್ಮ ತಾಯಿ ಹುಡುಗಿಯರಿಗೆ ಓದಿಸುತ್ತಿದ್ದ ಪವಿತ್ರ ಖುರ್‌ಆನ್ ಮತ್ತು ಭಾಷಾಂತರವನ್ನು ಕಲಿಸಿದ ಖುರ್‌ಆನ್ ಹಝ್ರತ್ ಮೀರ್ ಮುಹಮ್ಮದ್ ಇಸ್‌ಹಾಖ್ ಸಾಹಿಬ್(ರ) ಅವರ ಅನುವಾದವಾಗಿದೆ ಮತ್ತು ಪವಿತ್ರ ಖುರ್‌ಆನ್ ನ ಪ್ರತಿಯನ್ನು ಹಝ್ರತ್ ಅಮ್ಮಾ ಜಾನ್ ಸಾಹಿಬ ಅವರಿಗೆ ಉಡುಗೊರೆಯಾಗಿ ನೀಡಿದ್ದರು.

ಇಬ್ರಾಹೀಮ್ ಮುನೀಬ್ ಸಾಹಿಬ್ ಅವರ ಅಳಿಯ ಹೇಳುತ್ತಾರೆ: ಸಾಹಿಬ್‌ಝಾದ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರ ನಿಧನದ ನಂತರ ಅವರು ಹತ್ತು ವರ್ಷಗಳು ಖಾದಿಯಾನಿನಲ್ಲಿ ಇದ್ದರು. ಅನಂತರ ಆರೋಗ್ಯ ಸ್ಥಿತಿ ಕೆಟ್ಟು ಹೋಗಲು ಶುರುವಾದಾಗ ಅವರ ಪುತ್ರಿಯರು ಅವರನ್ನು ರಬ್ವಗೆ ಚಿಕಿತ್ಸೆಗಾಗಿ ಕೊಂಡು ಹೋದರು. ಆದರೂ ಖಲೀಫತುಲ್ ಮಸೀಹ್‌ರ ಅನುಮತಿ ಇಲ್ಲದೇ ದೀರ್ಘಕಾಲದ ವರೆಗೆ ಖಾದಿಯಾನಿನಿಂದ ಹೊರಗೆ ಇರುವುದಿಲ್ಲ ಎಂದು ಹೇಳುತ್ತಿದ್ದರು. ಅವರು ನನಗೆ ಈ ಕುರಿತು ಪತ್ರ ಬರೆದಿದ್ದರು. ನೀವು ಬಯಸುವಷ್ಟು ಕಾಲದ ವರೆಗೆ ಅಲ್ಲಿ ತಂಗಿರಿ ಎಂದು ನಾನು ಅವರೊಡನೆ ಹೇಳಿದ್ದೆ.

ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಅವರಿಗೆ ಖಾದಿಯಾನ್‌ಗೆ ಹೋಗುವಾಗ ಹೇಳಿದ್ದರು, ಖಾದಿಯಾನ್‌ನ ಹಿಂದೂ ಮಾರುಕಟ್ಟೆಗಳಿಗೆ ಹೋಗಬೇಡಿ ಏಕೆಂದರೆ ಅಲ್ಲಿನ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ನಿಂದಿಸಿದ್ದಾರೆ. ಅವರು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಮಾತುಗಳಿಗೆ ಎಷ್ಟು ಗೌರವ ನಿಡಿದರು ಎಂದರೆ ನಂತರ ಪರಿಸ್ಥಿತಿ ಬದಲಾಯಿತು. ಜನರು ಬಹಳ ಗೌರವದಿಂದ ವರ್ತಿಸಲು ಪ್ರಾರಂಭಿಸಿದರು ಮತ್ತು ಅನೇಕ ಜನರು ಜಲ್ಸಾದಲ್ಲಿ ಅಲ್ಲಿಗೆ ಹೋಗುತ್ತಿದ್ದರು, ಅಹ್ಮದೀಯರೂ ಅಲ್ಲಿಗೆ ಹೋಗುತ್ತಿದ್ದರು, ಕುಟುಂಬದವರೂ ಅಲ್ಲಿಗೆ ಹೋಗುತ್ತಿದ್ದರು ಆದರೆ ನೀವು ಎಪ್ಪತ್ತು ವರ್ಷಗಳ ವರೆಗೂ ಖಾದಿಯಾನ್‌ನ ಮಾರುಕಟ್ಟೆಗೆ ಹೋಗಲಿಲ್ಲ, ನೀವು ಅಮೃತಸರಕ್ಕೆ ಹೋಗಿ ಶಾಪಿಂಗ್ ಮಾಡುತ್ತಿದ್ದರು.

ಖಾದಿಯಾನ್‌ನ ಚಿಕ್ಕ ಮಕ್ಕಳು ಅವರನ್ನು ನಾನಿ ಅಮ್ಮಿ ಎಂದು ಕರೆಯುತ್ತಿದ್ದರು ಮತ್ತು ಅವರು ಅಜ್ಜಿಯಂತೆ ಎಲ್ಲರನ್ನೂ ಪ್ರೀತಿ ಮತ್ತು ಸಹಾನುಭೂತಿಯಿಂದ ನಡೆಸಿಕೊಂಡರು ಎಂದು ಅವರ ಮೊಮ್ಮಗಳು ಬರೆಯುತ್ತಾರೆ. ಮತ್ತೆ ಅವರ ಮುಮ್ಮಗಳು ಬರೆಯುತ್ತಾರೆ; ಒಮ್ಮೆ ಅವರು ದೌರ್ಬಲ್ಯದಿಂದ ವಿಶ್ರಾಂತಿ ಪಡೆಯುತ್ತಿದ್ದರು. ಸಂಜೆ ಹೊತ್ತು ಕೆಲವು ಮಹಿಳೆಯರ ಒಂದು ಗುಂಪು ದೂರದ ಜಮಾಅತ್‌ನಿಂದ ಭೇಟಿಯಾಗಲು

ಬಂದರು. ಮನೆಯಲ್ಲಿ ಹಿರಿಯರೂ ಇರಲಿಲ್ಲ, ನಾನಿ ವಿಶ್ರಾಂತಿ ಪಡೆಯುತ್ತಿದ್ದಾರೆ ಎಂದು ಹೇಳಿದೆ ಅದಕ್ಕೆ ಅವರು ಒಂದು ಪ್ರಾರ್ಥನಾ ಪತ್ರವನ್ನು ನೀಡಿ ಹೊರಟು ಹೋದರು. ನನ್ನ ಅಜ್ಜಿ ಎಚ್ಚರವಾದಾಗ. ಅವರಿಗೆ ನಾನು ಹೇಳಿದೆ ಇಬ್ಬರು ಮಹಿಳೆಯರು ಬಂದಿದ್ದರು, ತಕ್ಷಣ ಅವರು ಎದ್ದು ಪ್ರಾರ್ಥನಾ ಪತ್ರವನ್ನು ಓದಿದರು. ನಂತರ ಟೆಲಿಫೋನ್ ಮುಖಾಂತರ ಅವರು ಪತ್ರದಲ್ಲಿ ಏನು ಬರೆದಿದ್ದಾರೋ ಅದನ್ನೇ ಪಾಲಿಸುವಂತೆ ಸೂಚಿಸಿದರು. ಮತ್ತೆ ನನಗೆ ಹೇಳಿದರು:  ನಿಮ್ಮ ಅಜ್ಜನ ಹತ್ತಿರ ದೂರದೂರಿನಿಂದ ಜನರು ಪ್ರೀತಿಯಿಂದ ಬರುತ್ತಿದ್ದರು, ಹಾಗೆ ಹಿಂತಿರುಗಿ ಹೋಗಲು ಬಿಡುತ್ತಿರಲಿಲ್ಲ, ಆದುದರಿಂದ ಅತಿಥಿಗಳನ್ನು ಗೌರವದಿಂದ ಕೂರಿಸಬೇಕು ಎಂದು ನನಗೆ ವಿವರಿಸಿದರು. ನನಗೆ ತಿಳಿಸಬೇಕಾಗಿತ್ತು. ನಾನಿಯ ವಿವರಿಸುವ ರೀತಿ ತುಂಬಾ ಮಧುರವಾಗಿತ್ತು ಅದು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದೆ.

ಜಾಮಿಅ ಅಹ್ಮದಿಯಾ ಕೆನಡದಲ್ಲಿ ಕಲಿಯುತ್ತಿರುವ ಅವರ ಮೊಮ್ಮಗ ಅವರೊಡನೆ ಉಪದೇಶಿಸಲು ವಿನಂತಿಸಿದಾಗ ಅವರು ಹೇಳಿದರು: ಉಪದೇಶವನ್ನು ನೀನು ಖ಼ಲೀಫತುಲ್ ಮಸೀಹ್‌ರಿಂದ ಆಲಿಸುತ್ತಿದ್ದೀಯ. ಆದ್ದರಿಂದ ನಿನಗೆ ಉಪದೇಶ ನೀಡುವ ಅಗತ್ಯವಿಲ್ಲ. ಖ಼ಲೀಫತುಲ್ ಮಸೀಹ್‌ರ ಮಾತುಗಳನ್ನು ಗಮನವಿಟ್ಟು ಆಲಿಸು ಮತ್ತು ಅವುಗಳನ್ನು ಪಾಲಿಸು. ಅನಂತರ ಹೇಳುತ್ತಿದ್ದರು: **ರಬ್ಬಿ ಕುಲ್ಲಿ ಶೈಇನ್ ಖಾದಿಮುಕ ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ** ಎಂಬ ದುಆ ಹೇಳುತ್ತಿರು. ತನ್ನ ವಖ್ಫನ್ನು ಪೂರ್ಣವಾಗಿ ನಿಭಾಯಿಸು ಮತ್ತು ಖ಼ಲೀಫತುಲ್ ಮಸೀಹ್‌ರ ಸಮರ್ಥ ಸಹಾಯಿ (ಸುಲ್ತಾನೇ ನಸೀರ್) ಆಗಿ ಇರು.

ಅನೇಕ ಅಹ್ಮದಿಯೇತರರು ಕೂಡ ಅವರ ಜನಾಝ಼ದಲ್ಲಿ ಭಾಗವಹಿಸಿದ್ದರು. ಅವರಲ್ಲಿ ಮಾಜಿ ವಿಧಾನಸಭೆ ಸದಸ್ಯ ಫತೇ ಜಂಗ್ ಸಿಂಗ್ ಕೂಡ ಸೇರಿದ್ದಾರೆ. ನಮ್ಮ ಬಾಲ್ಯವು ಅವರ ಮನೆಗಳಲ್ಲಿ ಅವರ ಕೈಯಲ್ಲಿ ಕಳೆದಿದೆ ಎಂದು ಅವರು ಹೇಳಿದರು. ವಾಘಾ ಗಡಿಯಲ್ಲಿ ದಿವಂಗತರನ್ನು ಕರೆದುಕೊಂಡು ಹೋಗಲು ಕೂಡ ಹೋಗಿದ್ದರು. ನಾನು ನನ್ನ ತಾಯಿಯನ್ನು ಎರಡನೇ ಬಾರಿಗೆ ಸಮಾಧಿ ಮಾಡಿದ್ದೇನೆ ಎಂದು ಅವರು ಹೇಳುತ್ತಾರೆ. ನಾವು ಚಿಕ್ಕವರಿರುವಾಗ ಮನೆಗೆ ಹೋಗುತ್ತಿದ್ದೆವು, ಅವರು ನಮಗೆ ತಿನ್ನಿಸುತ್ತಿದ್ದರು ಎಂದು ಹೇಳಲಾಗುತ್ತದೆ.

ಅವರ ಓರ್ವ ಮೊಮ್ಮಗಳು ಮಾಲಾ ಹೇಳುತ್ತಾರೆ ಖಿಲಾಫತ್‌ನಿಂದ ಪ್ರೀತಿ ಮತ್ತು ವಿಧೇಯತೆಯಲ್ಲಿ ಅವರು ನಮಗೆ ಮಾದರಿಯಾಗಿದ್ದರು. ಅವರ ನಿಧನದ ನಂತರ, ಅವರನ್ನು ಸಂತಾಪ ಸೂಚಿಸಲು ನೂರಾರು ಕರೆಗಳು ಬಂದಿವೆ ಮತ್ತು ಎಲ್ಲರೂ ಅವರನ್ನು ಮೆಚ್ಚುತ್ತಿದ್ದಾರೆ ಎಂದು ಅವರು ಹೇಳುತ್ತಾರೆ. ನಂತರ ಕೆಲಕಾಲ ಹೋಗಿ ಅಲ್ಲಿಯೇ ಖಾದಿಯಾನ್‌ನಲ್ಲೇ ಇದ್ದು ಖಾದಿಯಾನ್‌ನ ಜನರು ಅವರನ್ನು ಎಷ್ಟು ಪ್ರೀತಿಸುತ್ತಿದ್ದರು ಮತ್ತು ಅವರು ಖಾದಿಆನ್‌ನ ಜನರ  ಮೇಲೆ ಅವರಿಗೆ ಎಷ್ಟೊಂದು ಪ್ರೀತಿ ಇದೆ ಎಂದು ನಾನು ನೋಡಿದೆ ಎಂದು ಹೇಳುತ್ತಾಳೆ. ಅದೇ ರೀತಿ, 2008 ರಲ್ಲಿ, ನೀವು ಖಾದಿಯಾನ್‌ಗೆ ಹೋಗಬೇಕಾಗಿದ್ದಾಗ ಅವರು ನನಗೆ ಪತ್ರ ಬರೆದಿದ್ದರು, ಆದರೆ ಪರಿಸ್ಥಿತಿಗಳಿಂದ ಹೋಗಲು ಸಾಧ್ಯವಾಗಲಿಲ್ಲ. ದಿಲ್ಲಿಯಿಂದ ವಾಪಸಾಗಬೇಕಾಯಿತು, ಮತ್ತು ಪ್ರವಾಸವು ಮುಂದೂಡಲಾಯಿತು ಆಗ ಅವರು ಭೇಟಿ ಸಾಧ್ಯವೋ ಇಲ್ಲವೋ ಗೊತ್ತಿಲ್ಲ ಎಂದು ಬಹಳ ಬೇಸರಗೊಂಡಿದ್ದರು.

ಇಲ್ಲಿ ವಾಸವಾಗಿರುವ ಆಬಿದ್ ಖಾನ್ ಸಾಹಿಬ್ ಅವರ ಮೊಮ್ಮಗಳ ಪತಿಯಾಗಿದ್ದಾರೆ, ಒಬ್ಬ ವ್ಯಕ್ತಿ ತನ್ನ ವಕ್ಫ್ ಅನ್ನು ಹೇಗೆ ಪೂರೈಸಬೇಕು ಎಂಬುದನ್ನು ಅವರು ತಮ್ಮ ಆದರ್ಶಗಳೊಂದಿಗೆ ನಮಗೆ ಕಲಿಸಿದರು ಎಂದು ಹೇಳುತ್ತಾರೆ. ಅವರು ತುಂಬಾ ಸೌಮ್ಯ ಸ್ವಭಾವದವನಾಗಿದ್ದರು ಆದರೆ ಒಮ್ಮೆ ಮಾತ್ರ ಅವರು ಬಹಳ ಕಟುವಾಗಿ ಮಾತನಾಡಿದ್ದನ್ನು ನೋಡಿದೆ ಅದೇನಾಯಿತು ಎಂದರೆ ಒಮ್ಮೆ ಸ್ಥಳೀಯ ಖಾದಿಯಾನ್‌ನ ಹುಡುಗಿಯ ಮದುವೆ ಇತ್ತು ಮತ್ತು ಅವರು (ಅಮತುಲ್ ಖುದ್ದೂಸ್ ಸಾಹಿಬಾ) ಅನಾರೋಗ್ಯಕ್ಕೆ ಒಳಗಾಗಿದ್ದರು. ಅಂದು ಅವರಿಗೆ ತೀವ್ರ ತಲೆನೋವು ಕಾಣಿಸಿಕೊಂಡಿತು, ಆದ್ದರಿಂದ ಅವರ ಅನಾರೋಗ್ಯವನ್ನು ಕಂಡು ಅವರ ಮೊಮ್ಮಗಳು ಕ್ಷಮೆಯಾಚಿಸುವಂತೆ ಹೇಳಿದರು. ಮದುವೆಗೆ ಹೋಗಬೇಡಿ. ಇಂದಯ ವಿಶ್ರಾಂತಿ ಪಡೆದುಕೊಳ್ಳಿ ಅದಕ್ಕೆ ಅವರು ಹೇಳಿದರು: ಮಾಲಾ ನಾನು ಮದುವೆಗೆ ಅವಶ್ಯವಗಿ ಹೋಗುತ್ತೇನೆ. ಖಾದಿಯಾನ್‌ನ ಜನರೊಂದಿಗೆ ನನ್ನ ಸಂಬಂಧವು ಹೇಗಿದೆ ಎಂದು ನಿಮಗೆ ತಿಳಿದಿಲ್ಲ.

ಅದೇ ರೀತಿ, ಡಾ.ಬಶೀರ್ ಅಹ್ಮದ್ ನಾಸಿರ್ ದರ್ವೇಶ್ ಖಾದಿಯಾನ್ ಅವರ ಪತ್ನಿ ಅಖೀಲಾ ಇಫತ್ ಸಾಹಿಬ ಅವರು ಹೇಳುತ್ತಾರೆ: ಅವರು ನಾಸಿರಾತ್ ಮತ್ತು ಲಜ್ನಾ ಅವರ ಮಾರ್ಗದರ್ಶನದಲ್ಲಿ ದರ್ವೇಶ್‌ಗಳ ಹೆಂಡತಿಯರು ಮತ್ತು ಹೆಣ್ಣುಮಕ್ಕಳಿಗೆ ಮಾರ್ಗದರ್ಶನ ನೀಡುತ್ತಿದ್ದರು. ಆಡಳಿತಾತ್ಮಕ ವಿಷಯಗಳನ್ನು ಚೆನ್ನಾಗಿ ನಿಭಾಯಿಸುವುದರಲ್ಲಿ ನಿಪುಣರಾಗಿದ್ದರು. ಅವರೊಂದಿಗೆ ಕೆಲಸ ಮಾಡುವಾಗ ನಿಮ್ಮ ಪ್ರೀತಿ, ವಾತ್ಸಲ್ಯ, ಬೆಂಬಲ ಮತ್ತು ಗೌರವವನ್ನು ಅನುಭವಿಸಬಹುದು. ನೀವು ಎಲ್ಲಾ ಕೆಲಸ ಮತ್ತು ಜವಾಬ್ದಾರಿಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಲು ಬಯಸಿದ್ದರು. ಅವರು ಆತ್ಮವಿಶ್ವಾಸ ಮತ್ತು ಸಂಘಟಿತ ವ್ಯಕ್ತಿತ್ವವನ್ನು ಹೊಂದಿದ್ದರು. ಏನು ಮಾಡಿದರೂ ಅವರ ಕೆಲಸದಲ್ಲಿ ಸ್ವಚ್ಛತೆ ಇರುತ್ತಿತ್ತು. ನಮಗೆ ಅವರು ಅನುವಾದದೊಂದಿಗೆ ಪವಿತ್ರ ಖುರ್‌ಆನ್ ಅನ್ನು ಕಲಿಸಿದ್ದಾರೆ, ಅದರೊಂದಿಗೆ ನ್ಯಾಯಶಾಸ್ತ್ರವನ್ನು ಸಹ ಕಲಿತಿದ್ದೇವೆ. ನಿಮ್ಮ ತರಬೇತಿ ಪಡೆದ ಜಮಾಅತ್ ಅಹ್ಮದಿಯಾದ ಯುವತಿಯರು ದೂರದೂರುಗಳಲ್ಲಿ ಹರಡಿ ಜಮಾಅತ್ ಸೇವೆ ಮಾಡುತ್ತಿದ್ದಾರೆ.

ಅದೇ ರೀತಿ ಹೈದರಾಬಾದ್‌ನ ಬುಶ್ರಾ ಮುಬಾರಕ ಸಾಹಿಬ ಹೇಳುತ್ತಾರೆ: ನಮ್ಮ ಅವರೊಂದಿಗೆ ನಿಕಟ ಕುಟುಂಬ ಸಂಬಂಧವನ್ನು ಹೊಂದಿದ್ದೇವೆ. ಜಲ್ಸದ ಸಂದರ್ಭದಲ್ಲಿ, ಅವರು ಮಧ್ಯರಾತ್ರಿಯವರೆಗೆ ಎಚ್ಚರವಾಗಿ ಅತಿಥಿಗಳ ಆಹಾರ ಮತ್ತು ವಿಶ್ರಾಂತಿಯನ್ನು ನೋಡಿಕೊಳ್ಳುತ್ತಿದ್ದರು ಮತ್ತು ಅವರು ನಮ್ಮ ಅತಿಥಿಗಳಲ್ಲ, ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅತಿಥಿಗಳಾಗಿದ್ದಾರೆ ಎಂದು ಹೇಳಿದರು. ಪ್ರತಿಯೊಂದು ಸಣ್ಣ ವಿಷಯವನ್ನು ಪರಿಶೀಲಿಸುತ್ತಿದ್ದರು.

ಅದೇ ರೀತಿ, ಸಾಜಿದಾ ತನ್ವೀರ್ ಸಾಹಿಬಾ ಅವರು ಖಾಲಿದ್ ಅಲಾಉದ್ದೀನ್ ಸಾಹಿಬ್ ಅವರ ಪತ್ನಿಯಾಗಿದ್ದಾರೆ, ಅವರು ಭಾರತದ ಲಜ್ನಾ ಸದಸ್ಯರಿಗೆ ತಾಯಿಯಾಗಿದ್ದರು ಎಂದು ಹೇಳುತ್ತಾರೆ. ತಾಯಿಯು ತನ್ನ ಶಿಶುವಿಗೆ ತನ್ನ ಬೆರಳನ್ನು ಹಿಡಿದು ಜೀವನದ ಎಲ್ಲಾ ರೀತಿನೀತಿಗಳನ್ನು ಕಲಿಸಿದಂತೆ, ಅದೇ ರೀತಿ ಹಝ್ರತ್ ಆಪಾಜಾನ್ ಸಾಹಿಬಾ ಅವರು ನಮ್ಮ ಶಿಕ್ಷಣ ಮತ್ತು ತರಬೇತಿಯನ್ನು ಪ್ರತಿಯೊಂದು ಅಂಶದಲ್ಲಿ, ಪ್ರತಿ ಕ್ಷಣದಲ್ಲಿ ನೋಡಿಕೊಂಡರು, ಅದಕ್ಕಾಗಿ ನಾವು ಮತ್ತು ನಮ್ಮ ಪೀಳಿಗೆಗಳು ಯಾವಾಗಲೂ ಕೃತಜ್ಞರಾಗಿರುತ್ತೇವೆ.

ಹೀಗೆ ಖಾದಿಯಾನಿನ ಜನರು ಅವರನ್ನು ಮತ್ತು ಅವರು ಖಾದಿಯಾನಿನ ಜನರನ್ನು ಬಹಳ ಪ್ರೀತಿಸುತ್ತಿದ್ದರು. ಖಾದಿಯಾನಿನ ಮಹಿಳೆಯರ ಅನೇಕ ಪತ್ರಗಳು ಬಂದಿವೆ. ಅವರು ಬಹಳ ಪ್ರೀತಿಯಿಂದ ಅವರ ಪ್ರಸ್ತಾಪ ಮಾಡಿರುವರು. ಅದೇ ರೀತಿಯಲ್ಲಿ ಖಾದಿಯಾನಿನ ಹಳೆಯ ನಿವಾಸಿಗಳ ಗಂಡುಮಕ್ಕಳು ಕೂಡ ಪತ್ರ ಬರೆದಿರುವರು. ಅವರು ನಮ್ಮನ್ನು ತಾಯಿಯಂತೆ ಪರಿಪಾಲನೆ ಮಾಡಿದರು ಎಂದು ಹೇಳಿರುವರು.

ಖ಼ಿಲಾಫತಿನೊಂದಿಗೆ ಅವರಿಗೆ ಬಹಳ ನಿಷ್ಠೆಯ ಸಂಬಂಧವಿತ್ತು. ಹಝ್ರ಼ತ್ ಖ಼ಲೀಫತುಲ್ ಮಸೀಹ್ ಸಾನಿ(ರ)ರೊಂದಿಗೆ ಅವರು ಇರಿಸಿದ ವಿನಯವಂತಿಕೆ ಮತ್ತು ಸಂಪೂರ್ಣ ನಿಷ್ಠೆಯ ಸಂಬಂಧ ಮುಂದುವರೆದಿತ್ತು ಮತ್ತು ನನ್ನೊಂದಿಗೂ ಅವರು ಅದೇ ಸಂಬಂಧವನ್ನು ನೆಲೆನಿಲ್ಲಿಸಿದ್ದರು. ಇದೊಂದು ಉದಾಹರಣೆಯಾಗಿದೆ. ಇಲ್ಲಿ ಕೂಡ ನನ್ನನ್ನು ಅತ್ಯಂತ ಗೌರವಾದರದಿಂದ ಭೇಟಿಯಾದದರು. 2005ರಲ್ಲಿ ಖಾದಿಯಾನಿಗೆ ಹೋದಾಗ ಬಹಳ ಕಾಳಜಿಯಿಂದ ಅತಿಥಿ ಸತ್ಕಾರ ಮಾಡಿದ್ದರು. ಪ್ರತಿಯೊಂದು ಭೇಟಿಯ ವೇಳೆ ಬಹಳ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು. ಅದು ಅವರ ಮುಖದಿಂದ ಪ್ರಕಟಗೊಳ್ಳುತ್ತಿತ್ತು. 2005ರಲ್ಲಿ ಆರೋಗ್ಯ ಸ್ಥಿತಿ ಕೆಟ್ಟಿದ್ದರೂ ಕೂಡ ಖಾದಿಯಾನಿನಿಂದ ಮರಳಿ ಹೋಗುವಾಗ ದೆಹಲಿ ತನಕ ಬಂದಿದ್ದರು.

ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ ಮತ್ತು ಅವರ ಮಕ್ಕಳಿಗೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಆಮೀನ್.

ಖಾದಿಯಾನಿನ ಜನರನ್ನು ಅವರು ಎಂತಹ ಪ್ರೀತಿಯಲ್ಲಿ ಇರಿಸಿದ್ದರೋ ಅದೇ ಪ್ರೀತಿಯಿಂದ ಖಾದಿಯಾನಿನವರು ಪರಸ್ಪರ ಇರಲು ಅಲ್ಲಾಹನು ಸೌಭಾಗ್ಯ ನೀಡಲಿ. ಈಗ ಖಾದಿಯಾನಿನಲ್ಲಿ ಹಝ್ರ಼ತ್ ಮಸೀಹ್ ಮಸೀಹ್(ಅ)ರ ಕುಟುಂಬದೊಂದಿಗೆ ನೇರವಾಗಿ ಸಂಬಂಧವಿರುವ ಯಾರೂ ಇಲ್ಲ. ಯಾರಾದರೂ ಅಲ್ಲಿಗೆ ಹೋಗುವಂತಹ ಸ್ಥಿತಿ ಅಲ್ಲಾಹನು ಮಾಡಲಿ.

ಒಂದು ಜನಝ಼ ಹಝಿರ್ ಇದೆ. (ಜನಾಝ಼ ಬಂದಿದೆ ಅಲ್ಲವೇ?) ಇದು ಯುಕೆಯ ಮುಹಮ್ಮದ್ ಅರ್ಷದ್ ಅಹ್ಮದಿ ಸಾಹಿಬ್ ಅವರದ್ದಾಗಿದೆ. ಅವರು ಇತ್ತೀಚೆಗೆ ಎಪ್ಪತ್ತೊಂದು ವರ್ಷ ವಯಸ್ಸಿನಲ್ಲಿ ನಿಧನರಾದರು.

**ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**

ಯೂಸುಫ್ ಅಹ್ಮದಿ ಸಾಹಿಬ್ ಅವರ ಪುತ್ರ ಆಗಿದ್ದರು. ಅವರು ನೈರೋಬಿಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೈಅತ್ ಮಾಡಿದ್ದರು. ಅವರಿಗೆ ಪುತ್ರರು ಅಥವಾ ಮೊಮ್ಮಕ್ಕಳು ಇದ್ದಾರೆಯೇ? ಆದಾಗ್ಯೂ, ಯೂಸುಫ್ ಅಹ್ಮದಿ ಸಾಹಿಬ್ ಅವರು 1935ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೈಅತ್

ಮಾಡಿದ್ದರು, ಅವರ ವಂಶಕ್ಕೆ ಇವರು ಸೇರಿದ್ದಾರೆ. ಅವರು ಹದಿನೈದನೇ ವಯಸ್ಸಿನಲ್ಲಿ ನೈರೋಬಿಯಿಂದ ಯುಕೆಗೆ ಬಂದರು. ಅವರು ಹಝ್ರತ್ ಖಲೀಫಾ ಸಲಾವುದ್ದೀನ್ ಸಾಹಿಬ್ ಅವರ ಪುತ್ರಿ ಮತ್ತು ಹಝ್ರತ್ ಡಾ. ಖಲೀಫಾ ರಶೀದುದ್ದೀನ್ ಸಾಹಿಬ್ ಅವರ ಮೊಮ್ಮಗಳು ಅಮತುಲ್ ಬಸೀರ್ ಸಾಹಿಬಾ ಅವರನ್ನು ವಿವಾಹವಾದರು. ಅಲ್ಲಾಹನ ಅನುಗ್ರಹದಿಂದ ದಿವಂಗತರು ಮೂಸಿಯಾಗಿದ್ದರು. ಅವರ ಪತ್ನಿಯಲ್ಲದೆ ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿ ಸೇರಿದ್ದಾರೆ. ಅವರು ಜಮಾಅತ್‌ನೊಂದಿಗೆ ದೃಢವಾದ ಸಂಬಂಧವನ್ನು ಹೊಂದಿದ್ದರು. ಅವರು ಉಳಿದುಕೊಂಡಲ್ಲೆಲ್ಲಾ ಜಮಾಅತ್‌ನ ಸೇವೆಯನ್ನು ವಿವಿಧ ಹುದ್ದೆಗಳಲ್ಲಿ ಮುಂದುವರೆಸಿದರು. ಖುದ್ದಾಮುಲ್-ಅಹ್ಮದಿಯಾ ಕೂಡ ಮುಹ್ತಮಿಮ್ ಆಗಿ ಕೆಲಸ ಮಾಡುವುದನ್ನು ಮುಂದುವರೆಸಿದರು. ಇಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲ ಜಮಾಅತ್ ಗ್ರೇಟ್ ಬ್ರಿಟನ್‌ನ ರಾಷ್ಟ್ರೀಯ ಪ್ರಕಾಶನದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ಅವರು ತಿಳುವಳಿಕೆಯುಳ್ಳ ವ್ಯಕ್ತಿಯಾಗಿದ್ದರು. ಸಲ್ಮಾನ್ ರಶ್ದಿಯವರು ಹಝ್ರತ್ ಪೈಗಂಬರ್(ಸ) ಅವರ ಗೌರವಾರ್ಥವಾಗಿ ಧರ್ಮನಿಂದೆಯ ಪುಸ್ತಕವನ್ನು ಬರೆದಾಗ, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರ ಆಜ್ಞೆಯ ಮೇರೆಗೆ ಮತ್ತು ಮಾರ್ಗದರ್ಶನ ಮೇರೆಗೆ ಅದನ್ನು ಖಂಡಿಸಲು ಒಂದು ಪುಸ್ತಕವನ್ನು ಬರೆಯಲು ಅನುಮತಿಸಲಾಯಿತು. ನಮಾಝ್ ಬಾಜಮಾಅತ್ ನಿರ್ವಹಿಸುವವರು. ನಾವು ಇಲ್ಲಿಗೆ ಸ್ಥಳಾಂತರಗೊಂಡಾಗಿನಿಂದ, ಇಲ್ಲಿಗೆ ಬಂದು ಪ್ರಾರ್ಥನೆ ಸಲ್ಲಿಸುವುದನ್ನು ಮುಂದುವರಿಸುವ ಉದ್ದೇಶದಿಂದ ಇಸ್ಲಾಮಾಬಾದ್ ಬಳಿ ತಮ್ಮ ನಿವಾಸವನ್ನು ಸಹ ತೆಗೆದುಕೊಂಡಿದ್ದರು. ಹಝ್ರತ್ ಪೈಗಂಬರ್ ಅಲ್ಲಲ್ಲಾಹು ಅಲೈಹಿವ ಸಲ್ಲಮ್ ಹಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಪ್ರೀತಿಯ ಸಂಬಂಧವಿತ್ತು. ಪವಿತ್ರ ಖುರ್‌ಆನ್ ಅನ್ನು ನಿಯಮಿತವಾಗಿ ಪಠಿಸುವವರು. ದಿವಂಗತರಿಗೆ ತಬ್ಲೀಗ್ ಮಾಡುವುದರಲ್ಲಿ ಬಹಳ ಆಸಕ್ತಿ ಇತ್ತು. ಅಂತೆಯೇ, ಚಂದಗಳು ನಿಯಮಿತವಾಗಿದ್ದವು. ಅವರು ಖಿಲಾಫತ್ ಬಗ್ಗೆ ಆಳವಾದ ಭಕ್ತಿ ಹೊಂದಿದ್ದ ಪ್ರಾಮಾಣಿಕ ವ್ಯಕ್ತಿ ಮತ್ತು ಪ್ರೀತಿ ಮತ್ತು ವಾತ್ಸಲ್ಯದಿಂದ ಜನರನ್ನು ಭೇಟಿ ಮಾಡುವ ಆಹ್ಲಾದಕರ ಮಾತುಗಾರರಾಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್)ರವರು ಒಮ್ಮೆ ಅವರ ಬಗ್ಗೆ ಹೇಳಿದರು: ಅರ್ಷದ್ ಅಹ್ಮದಿ ಸಾಹಿಬ್ ಅವರು ಯಾವಾಗಲೂ ವಿಧೇಯರಾಗಿರುವುದನ್ನು ನಾನು ಕಂಡುಕೊಂಡಿದ್ದೇನೆ, ಅವರ ಉದಾಹರಣೆಗಳು ಬಹಳ ಕಡಿಮೆ. ನಾನು ಅವರಿಗೆ ಏನು ಹೇಳಿದರೂ, ಅವರು ತಕ್ಷಣ ಒಪ್ಪಿದರು, ಮತ್ತು ಈ ವಿಷಯದಲ್ಲಿ, ಅವರು ಮತ್ತು ಅವರ ಇಡೀ ಕುಟುಂಬವು ನನ್ನ ಹೃದಯದಲ್ಲಿ ಬಹಳಷ್ಟು ಮೌಲ್ಯವನ್ನು ಹೊಂದಿದ್ದಾರೆ. ಮತ್ತು ವಾಸ್ತವವಾಗಿ ಈ ಅನುಸರಣೆ ಮತ್ತು ವಿಧೇಯತೆಯು ಖಿಲಾಫತ್‌ನೊಂದಿಗೆ ಮುಂದುವರೆಯಿತು. ಅವರು ವಿನಮ್ರ ಮತ್ತು ಖಿಲಾಫತ್‌ಗೆ ನಿಷ್ಠರಾಗಿರುವುದನ್ನು ನಾನು ನೋಡಿದ್ದೇನೆ. ಜಮಾಅತ್‌ನ ಪ್ರತಿಷ್ಠೆ, ಗೌರವಕ್ಕೆ ಸದಾ ಆದ್ಯತೆ ನೀಡುತ್ತಿದ್ದರು. ಸರ್ವಶಕ್ತನಾದ ಅಲ್ಲಾಹನು ಅವರನ್ನು ಕರುಣೆ ಮತ್ತು ಕ್ಷಮೆಯಿಂದ ನಡೆಸಿಕೊಳ್ಳಲಿ ಮತ್ತು ಅವರ ಮಕ್ಕಳಲ್ಲಿ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲಿ. ಅವರ ಒಬ್ಬ ಪುತ್ರ ವಾಖಿಫ‌ರ ಝಿಂದಗೀ ಆಗಿದ್ದಾರೆ.

ಮತ್ತೊಂದು ನಮಾಝೆ ಜನಾಝ ಗ್ವಾಯಿಬ್ ಇದೆ ಅದು ಆಫ್ರಿಕನ್-ಅಮೆರಿಕನ್ ಅಹ್ಮದ್ ಜಮಾಲ್ ಸಾಹಿಬ್ ಅವರದ್ದಾಗಿದೆ. ಅಮೇರಿಕಾದಲ್ಲಿ ವಾಸಿಸುತ್ತಿದ್ದರು. ಅವರು ತೊಂಬತ್ತೆರಡನೇ ವಯಸ್ಸಿನಲ್ಲಿ ಇತ್ತೀಚೆಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**

ಇವರು 1930 ರಲ್ಲಿ ಜನಿಸಿದರು. 1951 ರಲ್ಲಿ, ಅವರು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಕೈ ಮೇಲೆ ಬೈಅತ್ ಮಾಡಿದರು. 1950 ಮತ್ತು 1960 ರ ದಶಕಗಳಲ್ಲಿ, ದಿವಂಗತರಿಗೆ ಚಿಕಾಗೋದ ಮಸೀದಿ ಸಾದಿಕ್‌ಗೆ ಹಣವನ್ನು ದಾನ ಮಾಡಲು ಅವಕಾಶ ಲಭಿಸಿತು. ಅವರು ಅತ್ಯಂತ ವಿನಮ್ರ ವ್ಯಕ್ತಿತ್ವವನ್ನು ಹೊಂದಿದ್ದರು. ಜಮಾಅತ್ ಮತ್ತು ಖಿಲಾಫತ್ ಜೊತೆ ಅಪಾರ ಪ್ರೀತಿ, ನಿಷ್ಠೆ ಇತ್ತು. ಎಂ.ಟಿ.ಎ ವೀಕ್ಷಿಸುವುದನ್ನು ಮೊದಲು ಮನೆಯಲ್ಲಿ ಡಿಶ್ ಆಂಟೆನಾದೊಂದಿಗೆ ಮತ್ತು ನಂತರ ಆನ್‌ಲೈನ್‌ನಲ್ಲಿ ವ್ಯವಸ್ಥೆಗೊಳಿಸಲಾಯಿತು. ಅವರು ನಿಯಮಿತವಾಗಿ ನನ್ನ ಖುತುಬ ಜುಮುಅಗಳನ್ನು ಬಹಳ ಗಮನದಿಂದ ಕೇಳುತ್ತಿದ್ದರು. ಅವರು ಭೇಟಿಯಾದವರೊಂದಿಗೆ ಖುತ್‌ಬ ಜುಮುಅದ ಬಗ್ಗೆ ಮಾತನಾಡುತ್ತಿದ್ದರು. ಕೇವಲ ಕೇಳುತ್ತಿರಲಿಲ್ಲ ಬದಲಿಗೆ ನೋಟ್ಸ್ ಸಹ ತೆಗೆದುಕೊಳ್ಳುತ್ತಿದ್ದರು. ದಿವಂಗತರು ಮಸೀದಿಯಿಂದ 90 ಮೈಲುಗಳಷ್ಟು ದೂರದಲ್ಲಿ ವಾಸಿಸುತ್ತಿದ್ದರು, ಆದರೂ ಅವರ ವಯಸ್ಸು ಮತ್ತು ಕಳಪೆ ಆರೋಗ್ಯದ ಹೊರತಾಗಿಯೂ, ಅವರು ನಿಯಮಿತವಾಗಿ ಶುಕ್ರವಾರದ ಪ್ರಾರ್ಥನೆಗೆ ಹಾಜರಾಗಿರುತ್ತಿದ್ದರು. ನಿಯಮಿತವಾಗಿ ಚಂದಗಳನ್ನು ಪಾವತಿಸುವುದು. ಅವರು ಎಂದಿಗೂ ನೆನಪಿಸಬೇಕಾಗಿರಲಿಲ್ಲ. ಅವರು ಇತರ ಸಾಂಪತ್ತಿಕ ತ್ಯಾಗಳ ಯೋಜನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅವರಿಗೆ ಒಬ್ಬ ಮಗಳಿದ್ದಾರೆ ಆದರೆ ಅವರು ಜಮಾತ್‌ನೊಂದಿಗೆ ಸಂಬಂಧ ಹೊಂದಿಲ್ಲ. ಸರ್ವಶಕ್ತನಾದ ಅಲ್ಲಾಹನು ಅವರನ್ನು ಕ್ಷಮೆ ಮತ್ತು ಕರುಣೆಯಿಂದ ನಡೆಸಿಕೊಳ್ಳಲಿ ಮತ್ತು ಅವರ ಮಗಳಿಗಾಗಿ ಅವರ ಪ್ರಾರ್ಥನೆಗಳನ್ನು ಸ್ವೀಕರಿಸಲಿ ಮತ್ತು ಅಹ್ಮದಿಯತ್ ಅನ್ನು ಸ್ವೀಕರಿಸುವ ಅವಕಾಶವನ್ನು ಆಕೆಗೆ ನೀಡಲಿ. ಹೀಗೆ ಈಗ ಒಂದು ಜನಾಝ ಹಾಝಿರ್ ಇದೆ ಮತ್ತು ಇವು ಎರಡು ಜನಾಝ ಗ್ವಾಯಿಬ್ ಆಗಿದೆ. ಜುಮುಅ ನಮಾಝ್ ನಂತರ ಈ ಜನಝಗಳನ್ನು ನಿರ್ವಹಿಸಲಾಗುವುದು. ...*...*...*...

**ನಿಶ್ಚಿತಾರ್ಥದ ಸಮಯದಲ್ಲಿ ಸಿಹಿತಿಂಡಿಗಳನ್ನು ಹಂಚಲು ಅನುಮತಿ ಇದೆ, ಆದರೆ ಸಿಡಿಮದ್ದುಗಳನ್ನು ಸಿಡಿಸುವುದು ಮತ್ತು ಮನರಂಜನಾ ಕಾರ್ಯಕ್ರಮ ಇತ್ಯಾದಿಗಳನ್ನು ನಡೆಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನಿಶ್ಚಿತಾರ್ಥಗಳ ಸಮಾರಂಭದಲ್ಲಿ ಸಕ್ಕರೆ ಇತ್ಯಾದಿಗಳನ್ನು ಹಂಚಲಾಗುತ್ತದೆ ವಾಸ್ತವವಾಗಿ ಅದರ ಮೂಲ ಉದ್ದೇಶವೇನೆಂದರೆ, ಇತರ ಜನರಿಗೂ ಇದರ ಬಗ್ಗೆ ಸುದ್ದಿ ತಿಳಿಯಲಿ ಮತ್ತು ಇದರಲ್ಲಿ ಯಾವುದೇ ರೀತಿಯ ಅಡಚಣೆ ಉಂಟಾಗದಿರಲಿ ಎಂದಾಗಿದೆ. ಆದರೆ ಈಗ ಅದರ ಮೂಲ ಉದ್ದೇಶ ಕಣ್ಮರೆಯಾಗಿ ಅದರ ಸ್ಥಾನವನ್ನು ಕೇವಲ ನವೀಣಾಚರಣೆಗಳು ಪಡೆದುಕೊಂಡಿದೆ. ಮಾತ್ರವಲ್ಲ ಅದರೊಂದಿಗೆ ಇನ್ನೂ ಅನೇಕ ವಿಷಯಗಳು ಸೇರಿಕೊಂಡಿವೆ. ಆದ್ದರಿಂದ, ಅವುಗಳನ್ನು ಕಡ್ಡಾಯ ಪದ್ಧತಿಗಳೆಂದು ಪರಿಗಣಿಸಬಾರದು, ಇದರ ಬದಲು ಇದು ಮದುವೆಯ ಸಂಭಂಧಗಳನ್ನು ಕಾನೂನುಬದ್ಧಗೊಳಿಸಲು ಅಗತ್ಯವಾದ ವಿಷಯವೆಂದು ಅರಿಯಬೇಕು. ಸೃಷ್ಟಿಗಳಿಗೆ ಪ್ರಯೋಜನಕಾರಿಯಾಗುವ ವಿಷಯಗಳ ಮೇಲೆ ಶರೀಅತ್ ಎಂದು ತಡೆಯಾಗುವುದಿಲ್ಲ ಎಂಬುದನ್ನು ನೆನಪಿಡಿ, ಏಕೆಂದರೆ ಸೃಷ್ಟಿಗಳಿಗೆ ಪ್ರಯೋಜನ ನೀಡುವುದು ಶರಿಯತ್ತಿನ ಮೂಲ ಉದ್ದೇಶವಾಗಿದೆ. ಸಿಡಿಮದ್ದುಗಳು ಹಾಗೂ ಮನರಂಜನಾ ಕಾರ್ಯಕ್ರಮ ಮುಂತಾದವುಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಏಕೆಂದರೆ ಇದರಿಂದ ಸೃಷ್ಟಿಗಳಿಗೆ ಹಾನಿಯೇ ಹೊರತು ಯಾವುದೇ ಪ್ರಯೋಜನವನ್ನು ನೀಡುವುದಿಲ್ಲ."

**(ಮಲ್‌ಫೂಝಾತ್ ಸಂಪುಟ-2, ಪುಟ-310)**

**ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್[ಅ]ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್[ಅತಬಿಅ]ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಆಗಿದ್ದಾರೆ. ನಿಮ್ಮ(ಸ) ಅವರ ಮೇಲೆ ಸಂದೇಶವಾಹಕರ ಸರಪಳಿಯು ಮುಕ್ತಾಯಗೊಂಡಿದೆ. ಆದ್ದರಿಂದ ನಮ್ಮ ಪವಿತ್ರ ಪ್ರವಾದಿ(ಸ) ಅವರ ನಂತರ ಶಾಶ್ವತ ಪ್ರವಾದಿತ್ವವನ್ನು ಪಡೆಯಲು ಯಾರಿಗೂ ಹಕ್ಕಿಲ್ಲ.

"سُمِّيتُ نَبِيًّا مِنَ اللهِ عَلَى طَرِيقِ الْمَجَازِ لَا عَلَى وَجْهِ الْحَقِيقَةِ فَلَا تَهِيجُ هٰهُنَا غَيْرَةُ اللهِ وَلَا غَيْرَةُ رَسُولِهِ فَإِنِّي أُرَبَّى تَحْتَ جَنَاحِ النَّبِيِّ وَقَدَمِي هٰذَا تَحْتَ الْأَقْدَامِ النَّبَوِيَّةِ"-

ಅಲ್ಲಾಹನಿಂದ ನನಗೆ ಪ್ರವಾದಿಯ ಹೆಸರನ್ನು ಅಕ್ಷರಶಃ ನೀಡಲಾಗಿಲ್ಲ ಬದಲಿಗೆ ಸಾಂಕೇತಿಕವಾಗಿ ನೀಡಲಾಗಿದೆ. ಈ ರೀತಿಯಾಗಿ, ಅಲ್ಲಾಹನ ಮತ್ತು ಅಲ್ಲಾಹನ ಸಂದೇಶವಾಹಕರ ಆತ್ಮಗೌರವವನ್ನು ಇಲ್ಲಿ ಪ್ರಚೋದಿಸಲಾಗಿಲ್ಲ, ಏಕೆಂದರೆ ನಾನು ಹಝ್ರತ್ ಪೈಗಂಬರ್(ಸ) ಅವರ ರೆಕ್ಕೆಗಳ ಕೆಳಗೆ ಬೆಳೆದಿದ್ದೇನೆ ಮತ್ತು ನನ್ನ ಈ ಹೆಜ್ಜೆಯೂ ಹಝ್ರತ್ ಪೈಗಂಬರ್(ಸ) ರ ಪಾದದ ಕೆಳಗೆ ಇದೆ.

ಹೀಗೆ ಸೈಯದುನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಎಲ್ಲಿಯೂ ಶಾಶ್ವತ ಪ್ರವಾದಿತ್ವವನ್ನು ಪ್ರತಿಪಾದಿಸಲಿಲ್ಲ, ಬದಲಿಗೆ ಅವರು ಶಾಶ್ವತವಾದ ಪ್ರವಾದಿತ್ವವನ್ನು ಎಲ್ಲೆಡೆ ನಿರಾಕರಿಸಿದರು ಮತ್ತು ಶಾಶ್ವತ ಪ್ರವಾದಿತ್ವದ ಅರ್ಥವನ್ನು ಅವರು ಹಝ್ರತ್ ಪೈಗಂಬರ್(ಸ) ಅವರನ್ನು ಅನುಸರಿಸುವುದರಿಂದ ಮತ್ತು ಅವರ ಅನುಸರಣೆಯಿಂದ ಮುಕ್ತವಾಗಿ ಪ್ರವಾದಿತ್ವವನ್ನು ಪ್ರತಿಪಾದಿಸಬೇಕು. ಹೌದು, ಹಝ್ರತ್ ಪೈಗಂಬರ್(ಸ) ಅವರನ್ನು ಅನುಸರಿಸಿ ಮತ್ತು ಅವರ ಪ್ರೀತಿಯಲ್ಲಿ ನಾಶವಾದ ಪರಿಣಾಮವಾಗಿ, ಸರ್ವಶಕ್ತನಾದ ಅಲ್ಲಾಹನು ನನ್ನನ್ನು ಪ್ರವಾದಿ ಸ್ಥಾನಕ್ಕೆ ಏರಿಸಿದ್ದಾನೆ, ಅವರು(ಅ) ಈ ಪ್ರವಾದಿತ್ವವನ್ನು ನಿರಾಕರಿಸಲಿಲ್ಲ. ಮತ್ತು ಇದನ್ನು ನೀವು(ಅ) ಝಿಲ್ಲಿ ಮತ್ತು ಬುರೂಝಿ ಹಾಗೂ ಉಮ್ಮತಿ ನಬುವ್ವತ್ ಎಂದು ಹೆಸರಿಸಿದ್ದಾರೆ. ಆದ್ದರಿಂದ, ಪ್ರವಾದಿ ಮುಹಮ್ಮದ್(ಸ) ರ ಝಿಲ್ ಮತ್ತು ಬುರೂಝ್ (ಸದೃಶರೂಪ) ಆಗಿರುವುದರಿಂದ ಹಝ್ರತ್ ಮಸೀಹ್ ಮೌಊದ್(ಅ) ಅವರು ಝಿಲ್ಲಿ, ಬುರೂಝಿ ಹಗೂ ಉಮ್ಮತಿ ನಬೀ ಆಗಿದ್ದಾರೆ ಎಂದಯ ವಾದಿಸಿದ್ದಾರೆ. ಉಮ್ಮತಿ ನಬೀ ಆಗಿರುವುದ್ದರಿಂದ ಖತ್ಮೆ ನಬುವ್ವತ್‌ನ ಮುದ್ರೆಯು ಮುರಿಯುವುದಿಲ್ಲ. ಅದಕ್ಕೆ ಕಾರಣ ನವು ನಮ್ಮ ಅಹ್ಮದಿಯೇತರ ಸಹೋದರರಿಗೆ ನಿಮ್ಮ ನಂಬಿಕೆಯ ಪ್ರಕರ ಹಝ್ರತ್ ಈಸಾ ಮಸೀಹರು(ಅ) ಆಕಾಶದಿಂದ ಭೋಲೋಕಕ್ಕೆ ಅವತರಿಸಿದರೆ ಖತ್ಮೆ ನಬುವ್ವತ್‌ನ ಮುದ್ರೆಯು ಮುರಿಯುವುದಿಲ್ಲವೇ ಎಂದು ಪ್ರಶನಿಸಿದಾಗ, ಅವರು ಉಮ್ಮತಿ ನಬೀಯಾಗಿರುತ್ತಾರೆ ಎಂದು ಉತ್ತರಿಸುತ್ತಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಖತ್ಮೆ ನಬುವ್ವತ್‌ನ ಮುದ್ರೆಯನ್ನು ಮುರಿಯದ ಉಮ್ಮತಿ ನಬಿಯ ಬರುವಿಕೆ ನಿಮಗೆ ಸಹ ಅನುಮತಿಸಲಾಗಿದೆ. ಆದರೆ ಹಝ್ರತ್ ಈಸಾ(ಅ) ಯಾವುದೇ ಕಾರಣಕ್ಕು ಉಮ್ಮತಿ ನಬೀಯಾಗಲು ಸಾಧ್ಯವಿಲ್ಲ ಎಂದು ನೆನಪಿನಲ್ಲಿಡಬೇಕು. ಅವರು ಬನೀ ಇಸ್ರಾಯೇಲ್‌ನ ಸಂದೇಶವಾಹಕರಗಿದ್ದಾರೆ. ಅವರ ಬರುವಿಕೆಯೊಂದಿಗೆ, ಖತ್ಮೆ ನಬುವ್ವತ್‌ನ ಮುದ್ರೆಯು ಖಂಡಿತವಾಗಿಯೂ ಮುರಿಯಲ್ಪಡುತ್ತದೆ. ಆದರೆ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ(ಅ) ಅವರು ಉಮ್ಮತಿಯಾಗಿದ್ದಾರೆ, ಆದ್ದರಿಂದ ಅವರ(ಅ) ಪ್ರವಾದಿತ್ವದ ವಾದದಿಂದ ಖತ್ಮೆ ನಬುವ್ವತ್‌ನ ಮುದ್ರೆಯು ಮುರಿಯುವುದಿಲ್ಲ. ಈಗ ನಾವು ಸಯ್ಯದುನಾ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅಲೈಹಿಸ್ಸಲಾಮ್ ಅವರ ಕೆಲವು ಉಲ್ಲೇಖಗಳನ್ನು ಪ್ರಸ್ತುತಪಡಿಸುತ್ತೇವೆ. ಅವರು(ಅ) ಹೇಳುತ್ತಾರೆ:

"ನಾನು ಪ್ರವಾದಿ ಮುಹಮ್ಮದ್(ಸ) ಅವರನ್ನು ಅನುಸರಿಸುವ ಮೂಲಕ ಈ ಗೌರವವನ್ನು ಪಡೆದುಕೊಂಡಿದ್ದೇನೆ. ನಾನು ಪವಿತ್ರ ಪ್ರವಾದಿ(ಸ) ಅವರ ಉಮ್ಮತ್‌ನಿಂದ ಇರದಿರುದಿದ್ದರೆ ಮತ್ತು ಅವರನ್ನು ಅನುಸರಿಸದಿದ್ದರೆ, ನನ್ನ ಕಾರ್ಯಗಳು ಪ್ರಪಂಚದ ಎಲ್ಲಾ ಪರ್ವತಗಳಿಗೆ ಸಮಾನವಾಗಿದ್ದರೂ ನಾನು ಈ ಉದಾತ್ತ ಸಂಭಾಷಣೆಯನ್ನು ಎಂದಿಗೂ ಸ್ವೀಕರಿಸುತ್ತಿರಲಿಲ್ಲ, ಏಕೆಂದರೆ ಈಗ ಮುಹಮ್ಮದಿ ನಬುವ್ವತ್ ಅನ್ನು ಹೊರತುಪಡಿಸಿ ಎಲ್ಲಾ ನಬುವ್ವತ್‌ಗಳು ಮುಚ್ಚಲ್ಪಟ್ಟಿವೆ. ಶರೀಅತ್‌ನೊಂದಿಗೆ ಯಾರೂ ಪ್ರವಾದಿಯಾಗಿ ಬರಲು ಸಾಧ್ಯವಿಲ್ಲ ಮತ್ತು ಶರೀಅತ್ ಇಲ್ಲದೆ ಪ್ರವಾದಿಯಾಗ ಬಹುದು ಆದರೆ ಮೊದಲು ಉಮ್ಮತಿ ಆಗಿರುವವರನ್ನು ಹೊರತುಪಡಿಸಿ. ಈ ನಿಟ್ಟಿನಲ್ಲಿ, ನಾನು ಉಮ್ಮತಿ ಮತ್ತು ಪ್ರವಾದಿಯೂ ಎರಡೂ ಆಗಿದ್ದೇನೆ ಮತ್ತು ನನ್ನ ಪ್ರವಾದಿತ್ವ, ಅಂದರೆ ದೈವ ಸಂಭಾಷಣೆಯೂ ಹಝ್ರತ್ ಪೈಗಂಬರ್(ಸ.ಅ) ರ ಪ್ರವಾದಿತ್ವದ ಝಿಲ್ ಆಗಿದೆ ಮತ್ತು ನನ್ನ ಪ್ರವಾದಿತ್ವವು ಅದಕ್ಕಿಂತ ಹೆಚ್ಚೇನೂ ಅಲ್ಲ. ಅದು ನನ್ನಲ್ಲಿ ಕಾಣಿಸಿಕೊಂಡಿರುವ ಮುಹಮ್ಮದಿ ನಬುವ್ವತ್ ಆಗಿದೆ. ಮತ್ತು ನಾನು ಕೇವಲ ಝಿಲ್ ಆಗಿದ್ದರಿಂದ ಮತ್ತು ನಾನು ಉಮ್ಮತಿ ಆಗಿರುವುದರಿಂದ, ಹಝ್ರತ್ ಪೈಗಮಭರ್(ಸ) ಅವರ ವೈಭವವು ಇದರಿಂದ ಕಡಿಮೆಯಾಗುವುದಿಲ್ಲ. (ತಜಲ್ಲಿಯಾತೆ ಇಲಾಹಿಯ, ರೂಹಾನಿ ಖಝಾಇನ್, ಸಂಪುಟ–20, ಪುಟ–411)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನೆನಪಿಡಿ, ನನ್ನ ವಾದದಲ್ಲಿ ನಬಿಯ ಹೆಸರನ್ನು ಕೇಳಿ ಅನೇಕ ಜನರು ಮೋಸ ಹೋಗುತ್ತಾರೆ ಹಿಂದಿನ ಯುಗಗಳಲ್ಲಿ ಪ್ರವಾದಿಗಳು ನೇರವಾಗಿ ಸ್ವೀಕರಿಸಲ್ಪಟ್ಟ ಪ್ರವಾದಿತ್ವವನ್ನು ನಾನು ಪ್ರತಿಪಾದಿಸಿದ್ದೇನೆ ಎಂದು ಭಾವಿಸುತ್ತಾರೆ, ಆದರೆ ಅವರು ಈ ಕಲ್ಪನೆಯಲ್ಲಿ ತಪ್ಪಾಗಿದ್ದಾರೆ. ನನಗೆ ಅಂತಹ ಹಕ್ಕು ಇಲ್ಲ, ಬದಲಿಗೆ, ಸರ್ವಶಕ್ತನಾದ ಅಲ್ಲಾಹನ ಅನುಕೂಲತೆ (ಮಸ್ಲಿಹತ್) ಮತ್ತು ಬುದ್ಧಿವಂತಿಕೆಯು (ಹಿಕ್ಮತ್) ಹಝ್ರತ್ ಪೈಗಂಬರ್(ಸ) ಅವರ ಆಧ್ಯಾತ್ಮಿಕ ಶಕ್ತಿಯ ಪರಿಪೂರ್ಣತೆಯನ್ನು ಸಾಬೀತುಪಡಿಸಲು ನನಗೆ ಈ ಅವಕಾಶವನ್ನು ನೀಡಲಾಗಿದೆ, ಅಂದರೆ ಅವರ ಅನುಗ್ರಹದಿಂದ ನನ್ನನ್ನು ನಬುವ್ವತ್‌ನ ಸ್ಥಾನಕ್ಕೆ ಏರಿಸಲಾಗಿದೆ. ಆದ್ದರಿಂದ, ನನ್ನನ್ನು ಕೇವಲ ಪ್ರವಾದಿ ಎಂದು ಕರೆಯಲಾಗುವುದಿಲ್ಲ, ಬದಲಿಗೆ ಒಂದು ಕಡೆಯಿಂದ ಪ್ರವಾದಿ ಮತ್ತು ಇನ್ನೊಂದು ಬದಿಯಿಂದ ಉಮ್ಮತಿ, ಮತ್ತು ನನ್ನ ಪ್ರವಾದಿತ್ವವು ಹಝ್ರತ್ ಪೈಗಂಬರ್(ಸ) ಅವರ ಝಿಲ್ (ನೆರಳು) ಮಾತ್ರ ಆಗಿದೆ ಮತ್ತು ನಿಜವಾದ ಪ್ರವಾದಿತ್ವವಲ್ಲ, ಈ ಕಾರಣಕ್ಕಾಗಿ, ಹದೀಸ್‌ನಲ್ಲಿ ಮತ್ತು ನನ್ನ ಇಲ್‌ಹಾಮ್‌ನಲ್ಲಿ (ದೈವವಾಣಿ), ನಾನು ಪ್ರವಾದಿ ಎಂದು ಹೆಸರಿಸಲ್ಪಟ್ಟಂತೆಯೇ, ನನ್ನ ಹೆಸರು ಉಮ್ಮತಿ ಎಳದೂ ಹೆಸರಿಸಲಾಗಿದೆ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರನ್ನು ಅನುಸರಿಸುವ ಮೂಲಕ ಮತ್ತು ಅವರ ಮೂಲಕವೇ ನನಗೆ ಪ್ರತಿಯೊಂದು ಪರಿಪೂರ್ಣತೆ ಬಂದಿದೆ ಎಂದು ತಿಳಿಯಬಹುದು.

(ಹಖೀಖತುಲದ ವಹೀ, ರೂಹಾನಿ ಖಝಾಇನ್, ಸಂಪುಟ–22, ಪುಟ–154 ಅಡಿಟಿಪ್ಪಣಿ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ನಬುವ್ವತ್ ಮತ್ತು ರಿಸಾಲತ್‌ನ ಪದಗಳನ್ನು ಸರ್ವಶಕ್ತನಾದ ಅಲ್ಲಾಹನು ನನಗೆ ತನ್ನ ವಹಿಯಲ್ಲಿ (ವಾಣಿಯ) ನೂರಾರು ಬಾರಿ ಬಳಸಿದ್ದಾನೆ, ಆದರೆ ಈ ಪದದಿಂದ, ದೇವರ ಸಂಭಾಷಣೆಗಳು ಮತ್ತು ಸಂಬೋಧನೆಗಳು ಮಾತ್ರ ಹೇರಳವಾಗಿರುವ ಮತ್ತು ಅದೃಶ್ಯಜ್ಞಾನ ಒಳಗೊಂಡಿರುತ್ತವೆ, ಅದಕ್ಕಿಂತ ಹೆಚ್ಚೇನೂ ಇಲ್ಲ. ಪ್ರತಿಯೊಬ್ಬ ವ್ಯಕ್ತಿಯು ತಮ್ಮ ಸಂಭಾಷಣೆಯಲ್ಲಿ ಒಂದು ಪದವನ್ನು ಅಳವಡಿಸಿಕೊಳ್ಳಬಹುದು. **ಲಿಕುಲ್ಲಿ ಅಯ್ಯಿಸ್‌ತಲಿಹ** ಇದು ದೇವರ ಪಾರಿಭಾಷಿಕ ಪದವಾಗಿದೆ, ಇದು ಅನೇಕ ಸಂಭಾಷಣೆಗಳು ಮತ್ತು ಸಂಬೋಧನೆಗಳ ಹೆಸರು ಪ್ರವಾದಿತ್ವ ಎಂದಿಸಿದ್ದಾನೆ. ಅಂದರೆ ಅಂತಹ ಸಂಭಾಷಣೆಗಳಲ್ಲಿ ಆಗಾಗ್ಗೆ ಅದೃಶ್ಯ ಸುದ್ದಿಗಳನ್ನು ನೀಡಲಾಗುತ್ತದೆ ಮತ್ತು ಹಝ್ರತ್ ಪೈಗಂಬರ್(ಸ) ಅವರ ಅನುಗ್ರಹದಿಂದ ಬೇರ್ಪಟ್ಟು ಪ್ರವಾದಿತ್ವವನ್ನು ಪ್ರತಿಪಾದಿಸುವ ವ್ಯಕ್ತಿಯ ಮೇಲೆ ಅಲ್ಲಹನ ಶಾಪವಿದೆ. ಆದರೆ ಈ ಪ್ರವಾದಿತ್ವವು ಹಝ್ರತ್ ಪೈಗಂಬರ್(ಸ) ಅವರ ಪ್ರವಾದಿತ್ವವಾಗಿದೆ ಹೊಸ ಪ್ರವಾದಿತ್ವವಲ್ಲ ಮತ್ತು ಅದರ ಮೂಲ ಉದ್ದೇಶವು ಇಸ್ಲಾಂ ಧರ್ಮದ ಸತ್ಯಾಂಶವನ್ನು ಜಗತ್ತಿಗೆ ತೋರಿಸುವುದು ಮತ್ತು ರಸೂಲುಲ್ಲಾಹ್(ಸ) ಅವರ ಸತ್ಯವನ್ನು ತೋರಿಸುವುದಾಗಿದೆ."

(ಚಶ್ಮ–ಎ–ಮಾರಿಫತ್, ರೂಹಾನಿ ಖಝಾಇನ್, ಸಂಪುಟ–23, ಪುಟ–341)

"ನಾನು ಅವರ ಸಂದೇಶವಾಹಕನನ್ನು ಪ್ರಾಮಾಣಿಕವಾಗಿ ನಂಬಿದ್ದೇನೆ ಮತ್ತು ಎಲ್ಲಾ ಪ್ರವಾದಿತ್ವವು ಅವರೊಂದಿಗೆ ಕೊನೆಗೊಂಡಿದೆ ಮತ್ತು ಅವರ ಷರೀಅತ್ (ಕಾನೂನು) ಖಾತಮುಲ್ ಷರೀಅತ್ ಆಗಿದೆ ಎಂದು ನನಗೆ ತಿಳಿದಿದೆ, ಆದರೆ ಒಂದು ರೀತಿಯ ಪ್ರವಾದಿತ್ವವು ಕೊನೆಗೊಂಡಿಲ್ಲ, ಅಂದರೆ, ಅವರನ್ನು ಪರಿಪೂರ್ಣವಾಗಿ ಅನುಸರಿಸುವ ಮೂಲಕ ಪಡೆಯುವ ಪ್ರವಾದಿತ್ವ ಮತ್ತು ಅದು ಅವರ ದೀಪದಿಂದ ಬೆಳಕನ್ನು ಪಡೆದುಕೊಳ್ಳುತ್ತದೆ, ಅದು ಕೊನೆಗೊಳ್ಳುವುದಿಲ್ಲ ಏಕೆಂದರೆ ಅದು ಮುಹಮ್ಮದಿ ನಬುವ್ವತ್ ಆಗಿದೆ, ಅಂದರೆ, ಅದು ಅವರ ಝಿಲ್ ಆಗಿದೆ ಮತ್ತು ಅದು ಅವರಿಂದ, ಮತ್ತು ಅದು ಅವರ ಅಭಿವ್ಯಕ್ತಿಯಾಗಿದೆ ಮತ್ತು ಅದು ಅವರಿಂದ ಅನುಗ್ರಹಿಸಲ್ಪಟ್ಟಿದೆ.

(ಚಶ್ಮ–ಎ–ಮಾರಿಫತ್, ರೂಹಾನಿ ಖಝಾಇನ್, ಸಂಪುಟ–23, ಪುಟ–340)

ಹಖೀಖಿ ನಬಿ (ನಿಜವಾದ ಪ್ರವಾದಿ) ಯ ಬಗ್ಗೆ ಇರುವ ಆಕ್ಷೇಪಕ್ಕೆ ನಾವು ಉತ್ತರಿಸಿದ್ದೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಎಲ್ಲಿ ತಮ್ಮನ್ನು ನಿಜವಾದ ಪ್ರವಾದಿ ಎಂದು ಘೋಷಿಸಿದರು ಎಂಬುದನ್ನು ನಮಗೆ ತಿಳಿಸುವುದು 'ಮುನ್ಸಿಫ್' ಪತ್ರಿಕೆಯ ಸಂಪಾದಕರ ಜವಾಬ್ದಾರಿಯಾಗಿದೆ. ಮುಂದಿನ ಸಂಚಿಕೆಯಲ್ಲಿ, ಝಿಲ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಆಕ್ಷೇಪಣೆಗೆ ನಾವು ಪ್ರತಿಕ್ರಿಯಿಸುತ್ತೇವೆ.

**(ಮನ್ಸೂರ್ ಅಹ್ಮದ್ ಮಸ್ರೂರ್)**

## ತಫ್ಸೀರೆ ಕಬೀರ್

**ವಿಗ್ರಹಗಳನ್ನು ಪೂಜಿಸಿ ದೇವನನ್ನು ಪಡೆದಿದ್ದೇನೆ, ಅವು ನನ್ನ ಪ್ರಾರ್ಥನೆಯನ್ನು ಕೇಳುತ್ತವೆ ಮತ್ತು ಸ್ವೀಕರಿಸುತ್ತವೆ ಮತ್ತು ಲೋಕವು ಈ ಸ್ವೀಕೃತಿಯ ದೃಷ್ಟಾಂತ ಕಂಡಿರುವಂತಹ ವಾದ ಮಾಡುವ ಯಾವ ವ್ಯಕ್ತಿಯೂ ಈ ಲೋಕದಲ್ಲಿ ಹುಟ್ಟಿರಲಿಲ್ಲ.**

ಶಿರ್ಕ್ (ಬಹುದೇವಾರಾಧನೆ) ವಿಷಯ ಮತ್ತೆ ಪ್ರಸ್ತಾಪಿಸಲಾಗಿದೆ. ಆದರೆ ಇದರಲ್ಲಿ ಒಂದು ಹೊಸ ಪುರಾವೆಯನ್ನು ಪ್ರಸ್ತುತಪಡಿಸಲಾಗಿದೆ. ಹಾಗೆ ಸುಮ್ಮನೆ ಈ ವಿಷಯ ಪುನ: ಪ್ರಸ್ತಾಪಿಸಲಾಗಿಲ್ಲ. ಅಲ್ಲಾಹನು ಹೇಳಿದನು. ಬಹುದೇವತ್ವ (ಶಿರ್ಕ್) ಸರಿಯಿರುತ್ತಿದ್ದರೆ ಮುಶ್ರಿಕ್‌ಗಳು ದೇವಪುರುಷರಾಗಿರುತ್ತಿರಲಿಲ್ಲವೇ? **ಇಝ್ಝುಲ್ ಲಬ್‌ತಗೌ ಇಲಾ ಝಿಲ್ ಅರ್ಷಿ ಸಬೀಲ** ಅರ್ಥ ಇರುವುದೇ ಶಿರ್ಕ್ ಸರಿಯಿಂದಾಗಿರುತ್ತಿದ್ದರೆ ಆಕಾಶದ ಆ ಪ್ರಭುವಿನೊಡನೆ ಸಾನಿಧ್ಯ ಸಾಧಿಸುತ್ತಿದ್ದರು. ಏಕೆಂದರೆ ಅವರ ಪುತ್ರರು ಅಥವಾ ಪುತ್ರಿಯರೊಡನೆ ಸಂಪರ್ಕ ಸಾಧಿಸಿ ಅವರ ಸಾನಿಧ್ಯದ ಮಾರ್ಗ ತೆರೆಯಬೇಕಾಗಿತ್ತು.

ಇನ್ನೊಂದೆಡೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಸ್ವಯಂ ಮುಶ್ರಿಕರ ವಾದ ವಿವರಿಸಿದ್ದಾನೆ, ಅವರು ಸಹ ಇದೇ ಉದ್ದೇಶಕ್ಕಾಗಿ ಎಂದರೆ ದೇವಸಾಮಿಪ್ಯಕ್ಕಾಗಿ ಆರಾಧನೆ ಮಾಡುತ್ತಿದ್ದರು. ಸೂರ: ಝುಮರ್‌ನಲ್ಲಿ ಅಲ್ಲಾಹನು ಹೇಳಿದನು. **ಮಾ ನೂಅ್‌ಬುದುಹುಮ್ ಇಲ್ಲಾ ಲಿಯುಖರ್ರಿಬೂನಾ ಇಲಾಲ್ಲಾಹಿ ಝುಲ್‌ಫಾ** (ಅಝ್ಝುಮರ್–1 ರುಕು) ಅವರು ನಮ್ಮನ್ನು ಅಲ್ಲಾಹನಿಗೆ ಹೆಚ್ಚು ನಿಕಟಗೊಳಿಸಲಿಕ್ಕಾಗಿ ಮಾತ್ರವೇ ನಾವು ಅವರನ್ನು ಆರಾಧಿಸುತ್ತಿರುವುದು. ಇಲ್ಲಿ ಅವರ ವಾದವನ್ನು ಶಿರ್ಕ್ ರದ್ದುಪಡಿಸುವ ಸಲುವಾಗಿ ಪ್ರಸ್ತುತಪಡಿಸಲಾಗಿದೆ. ಅವರ ಉದ್ದೇಶ ಅಲ್ಲಾಹನ ನಿಕಟಗೊಳಿಸಲು ಆಗುತ್ತಿದ್ದರೆ, ಆ ಉದ್ದೇಶ ಸಾಧಿಸಬೇಕಿತ್ತು. ಆದರೆ ಅದರ ಯಾವ ಪ್ರಭಾವಗಳು ಕಂಡುಬರುತ್ತಿಲ್ಲ. ಪವಿತ್ರ ಖುರ್‌ಆನ್ ಮೂಲಕ ನಿಕಟ ಸಂಬಂಧದ ಬಗ್ಗೆ ಈ ಕೆಳಗಿನ ಪ್ರಭಾವಗಳು ತಿಳಿದುಬರುತ್ತವೆ. ಪ್ರಥಮವಾಗಿ ಪ್ರಾರ್ಥನೆ ಸ್ವೀಕಾರ, ಸೂರ: ಅಲ್ ಬಖರ್ ರುಕು 23 ರಲ್ಲಿ ಅಲ್ಲಾಹನು ಹೇಳಿದನು. **ವ ಇಝೂ ಸಅಲಕ ಇಬಾದಿ ಅನ್ನೀ ಫಇನ್ನೀ ಖರೀಬ್; ಉಜೀಬು ದಅ್‌ವತದ್ದಾಇ ಇಝೂ ದಆನ್.** "ಹೇ ಪ್ರವಾದಿ, ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ ಹೇಳು, ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನ ಸಮೀಪವಿರುವ ಲಕ್ಷಣವೇನೆಂದರೆ ಬೇಡುವವನ ಬೇಡಿಕೆಗೆ ಉತ್ತರಿಸುತ್ತೇನೆ. ಇದು ಎಂತಹ ಲಕ್ಷಣವಾಗಿದೆ ಎಂದರೆ ಮುಶ್ರಿಕರು ಸಹ ಅಲ್ಲಗಳೆಯಲಾರರು. ಆದರೆ ಈ ಲಕ್ಷಣ ಯಾವ ಮುಶ್ರಿಕನಲ್ಲೂ ಕಂಡುಬರುತ್ತಿಲ್ಲ. ಪ್ರಾರ್ಥನೆ ಸ್ವೀಕಾರದ ಲಕ್ಷಣ ತೋರಿಸುವ ಮುಶ್ರಿಕರಲ್ಲಿ ಒಬ್ಬನು ಸಹ ಇಲ್ಲ. ವಿಗ್ರಹಗಳನ್ನು ಪೂಜಿಸಿ ದೇವನೊಡನೆ ನಿಕಟ ಸಂಬಂಧ ಪಡೆದಿದ್ದೇನೆ. ಅವು ನನ್ನ ಪ್ರಾರ್ಥನೆಯನ್ನು ಆಲಿಸುತ್ತದೆ ಮತ್ತು ಸ್ವೀಕರಿಸುತ್ತವೆ ಮತ್ತು ಲೋಕವು ಈ ದೃಷ್ಟಾಂತದ ಸತ್ಯ ಕಂಡಿದೆ ಎಂಬ ವಾದ ಮಾಡುವ ಯಾವ ವ್ಯಕ್ತಿಯೂ ಲೋಕದಲ್ಲಿ ಹುಟ್ಟಲಿಲ್ಲ.

ಎರಡನೆಯ ಲಕ್ಷಣ ದೈವಿಕ ಸಾಮಿಪ್ಯ ಸೂರಃ ವಾಖಿಅದಲ್ಲಿ ವಿವರಿಸಲಾಗಿದೆ. ಇಲ್ಲಿ ದೇವಸಂಬಂಧದ ವಿವರ ನೀಡುತ್ತಾ ಹೇಳಲಾಗಿದೆ: **ಲಾ ಯಸ್‌ಮಊನ ಫೀಹಾ ಲಗ್‌ವನ್ ವಲಾ ತಾಅ್‌ಸೀಮಾ. ಇಲ್ಲಾ ಖೀಲನ್ ಸಲಾಮನ್ ಸಲಾಮ** (ವಾಖಿಅ–16) ಅವರು ಅಲ್ಲಿ ವ್ಯರ್ಥ ಅಥವಾ ಪಾಪಕರವಾದ ಮಾತನ್ನು ಆಲಿಸಲಾರರು. ಸಲಾಮ್ ಸಲಾಮ್ (ಶಾಂತಿ, ಶಾಂತಿ) ಎಂಬ ಹಾರೈಕೆಯ ಮಾತುಗಳ ಹೊರತು ಎಂದರೆ ಪ್ರಭುವಿನ ನಿಕಟಸಂಬಂಧ ದೊರೆತಲ್ಲಿ ಅಲ್ಲಿ ಯಾವ ವ್ಯರ್ಥ ಅಥವಾ ಪಾಪಕರ ಮಾತು ಕೇಳಿಬರುವುದಿಲ್ಲ, ಜನರು ಬೇರೆಯೊಬ್ಬರ ದುಷ್ಟತನದಿಂದ ಸುರಕ್ಷಿತರಾಗಿರುತ್ತಾರೆ ಮತ್ತು ಒಬ್ಬರು ಮತ್ತೊಬ್ಬರ ಮೇಲೆ ಶಾಂತಿಯನ್ನು ಬಯಸುತ್ತಾರೆ ಮತ್ತು ಅಲ್ಲಾಹನಿಂದಲೂ ಅವರಿಗೆ ಶಾಂತಿ ದೊರೆಯುತ್ತದೆ. ಈ ಲಕ್ಷಣವು ಯಾವ ಮುಶ್ರಿಕನು ನಿರಾಕರಿಸುವಂತಿಲ್ಲ, ಸ್ಪಷ್ಟವಿದೆ ಯಾರಿಗೆ ದೇವ ಸಾಮಿಪ್ಯ ದೊರೆತಿರುತ್ತದೆ, ಅವರು ವ್ಯರ್ಥ ಮಾತು ಮತ್ತು, ಪಾಪಗಳಿಂದ ದೂರ ಉಳಿದುಕೊಳ್ಳುವರು. ಅಲ್ಲಾಹನ ದಾಸನಾಗಿ ಅವನ ಇತರ ದಾಸರ ಹಿತಕ್ಕಾಗಿ ಶ್ರಮಿಸುವನು ಮತ್ತು ಗೊಂದಲ ಸೃಷ್ಟಿಸಲಾರನು.

ಈ ಲಕ್ಷಣಗಳು ಸಹ ಯಾವ ಮುಶ್ರಿಕರಲ್ಲೂ ದೊರೆಯದು. ಮೊದಲು ವ್ಯರ್ಥ ಮಾತುಗಳಿಂದ ದೂರ ಉಳಿಯುವುದು, ಮುಶ್ರಿಕರಲ್ಲಿ ಈ ಮಾತು ಎಲ್ಲಿರುತ್ತದೆ, ಅವನಂತೂ ಶಿರ್ಕ್‌ನ ದೆಶೆಯಿಂದಾಗಿ ಹಾಸ್ಯಸ್ಪದವಾದ ಮಾತುಗಳನ್ನು ಆಡುತ್ತಾನೆ. ಒಬ್ಬ ತಿಳಿಗೇಡಿ ಹಾನಿ ಅಥವಾ ಲಾಭ ಕೊಡದ ವಿಗ್ರಹದ ಮುಂದೆ ಸಾಷ್ಟಾಂಗವೆರುತ್ತಾನೆ, ಅದನ್ನು ಆದರಿಸುತ್ತಾನೆ. ಬುದ್ಧಿವಂತರು ಅವನ ಈ ಚಟುವಟಿಕೆಗಳನ್ನು ಕಂಡು ಆಶ್ಚರ್ಯಪಡುತ್ತಾರೆ. ಭಾರತದಲ್ಲಿ ಗೋವಿನ ವಿಷಯದಲ್ಲಿ ಎದ್ದಿರುವ ವಾದ ಯಾವ ಬುದ್ಧಿವಂತ ವ್ಯಕ್ತಿ ಅದನ್ನು ಸರಿ ಎನ್ನುವಂತಿದೆ. ಗೋವು ಪೂಜಿಸುವವರು ಅದರ ಗೋವಿ ಹಾಲು ಅದರ ಕರು ಕುಡಿಯದಂತೆ ಬೇರ್ಪಡಿಸುತ್ತಾರೆ. ಸ್ವಯಂ ಧಾನ್ಯ ತಿನ್ನುತ್ತಾರೆ. ಅದಕ್ಕೆ ಹುಲ್ಲು ತಿನ್ನಿಸುತ್ತಾರೆ. ಅದನ್ನು ಕಟ್ಟಿ ಇಡುತ್ತಾರೆ. ಎತ್ತಿನ ಮೇಲೆ ಭಾರ ಹಾಕುತ್ತಾರೆ. ಸವಾರಿಯ ಕೆಲಸ ತೆಗೆದುಕೊಳ್ಳುತ್ತಾರೆ, ಹೊಡೆಯುತ್ತಾರೆ ಮತ್ತೆ ಅದನ್ನು ಮಾತೆ ಎನ್ನುತ್ತಾರೆ. ಅಷ್ಟಿದ್ದು ಹಾಸ್ಯದ ಮಾತೇನೆಂದರೆ ಹಿಂದೂಗಳು ಕ್ರಿಸ್ತರಿಗೆ ಹೀಯಾಳಿಸುತ್ತಾರೆ, ಅವರು ಒಬ್ಬ ದುರ್ಬಲ ದಾಸನನ್ನು ದೇವನನ್ನಾಗಿ ಮಾಡುತ್ತಾರೆ ಎಂದು. ಅವರು ಇವರ ಮೇಲೆ ಹಾಸ್ಯ ಮಾಡುತ್ತಾರೆ ಒಂದು ನಿರ್ಬಲ ಪ್ರಾಣಿಯನ್ನು ದೇವಿ ಎಂದು ಭಾವಿಸುತ್ತಿದ್ದಾರೆ ಎಂದು. ಈ ವ್ಯರ್ಥ ಮಾತುಗಳನ್ನು ನೋಡಿ ಒಬ್ಬ ಏಕದೇವನ ಭಕ್ತನ ಬಾಯಿಯಿಂದ ತಕ್ಷಣ ಉಚ್ಚರಿಸುವಂತಾಗುತ್ತದೆ. **ಲಾ ಹೌಲ ವಲಾ ಖುವ್ವತ್ ಇಲ್ಲಾ ಬಿಲ್ಲಾಹ್.** ಎರಡನೆಯ ಲಕ್ಷಣ ಪಾಪಗಳಿಂದ ಉಳಿಯುವುದಾಗಿದೆ. ಮುಶ್ರಿಕ್ ಶಿರ್ಕ್ ಮಾಡುತ್ತಾ ಎಂದರೆ ಬಹುದೇವಾರಾಧನೆಯಲ್ಲಿ ತೊಡಗಿ ಪಾಪಗಳಿಂದ ದೂರ ಉಳಿಯಲು ಸಾಧ್ಯವೇ ಇಲ್ಲ. ನಿಸ್ಸಂಶಯವಾಗಿ ಮುಶ್ರಿಕ್‌ರಲ್ಲೂ ಕೆಲವರು ಸಜ್ಜನರಿರುತ್ತಾರೆ. ಆದರೆ ಅವರ ಈ ಸಜ್ಜನಿಕೆ ಶಿರ್ಕ್ ಕಾರಣದಿಂದಲ್ಲ. ಬದಲು ಶಿರ್ಕ್ ಹೊರತಾಗಿದೆ. ಇಂತಹ ಜನರು ಸ್ವಭಾತ: ಒಳ್ಳೆಯರಾಗಿರುತ್ತಾರೆ. ಆದ್ದರಿಂದ ಶಿರ್ಕ್ ಅವರಿಗೆ ಹಿಡಿಸುವುದಿಲ್ಲ. ಉದಾಹರಣೆಗೆ ಗೋವನ್ನು ತೆಗೆದುಕೊಳ್ಳಿ, ಗೋವಿಗೆ ಪೂಜಿಸುವವರು ಗೋವಿಗೆ ನಾನಾ ರೀತಿಯಲ್ಲಿ ದು:ಖ ಕೊಡುತ್ತಾರೆ, ಅವರು ಈ ಕಾರ್ಯ ಮಾಡಲು ವಿವಶರಾಗಿದ್ದಾರೆ. ಏಕೆಂದರೆ ಗೋವನ್ನು ದೇವನು ಮನುಷ್ಯನ ಸೇವೆಗಾಗಿ ಸೃಷ್ಟಿಸಿದ್ದಾನೆ. ಅದರಿಂದ ಸೇವೆ ಪಡೆಯದೆ ಇರಲು ಸಾಧ್ಯವಿಲ್ಲ. ಅದರ ಪರಿಣಾಮವಾಗುವುದೇನೆಂದರೆ ಅವರು ಗೋವಿನಿಂದ ಸೇವೆಯು ಪಡೆಯುತ್ತಾರೆ. ಅದರ ಜೊತೆಯಲ್ಲಿ ಮನಸ್ಸಿನಲ್ಲಿ ಪಾಪಭಾವನೆ ಬೆಳೆಯುತ್ತದೆ ಮತ್ತು ಆತ್ಮವು ಅಪವಿತ್ರಗೊಳ್ಳುತ್ತದೆ. ನೋಡಿರಿ ಹಿಂದೂಗಳು ದಸರಾ ಆಚರಿಸುತ್ತಾರೆ. ರಾವಣ ಬ್ರಾಹ್ಮಣನಾಗಿದ್ದ ಮತ್ತು ರಾಮ ಕ್ಷತ್ರಿಯ, ದಸರ ಆಚರಿಸಿ ಒಂದು ದಿನ ಪಶ್ಚಾತ್ತಾಪಪಡುವ ದಿನ ಎಂದು ಆಚರಿಸುತ್ತಾರೆ. ಅದರಿಂದ ಬ್ರಾಹ್ಮಣನನ್ನು ಅವಹೇಳನ ಮಾಡಿದ ಪಾಪ ನಿವಾರಣೆಯಾಯಿತು ಎಂದು ಭಾವಿಸುತ್ತಾರೆ. ಕ್ರಿಸ್ತರ ಸಂಗತಿಯೂ ಹಾಗೆಯೇ ಇದೆ. ಮಸೀಹನನ್ನು ಒಂದೆಡೆ ದೇವನನ್ನಾಗಿ ಮಾಡುತ್ತಾರೆ. ಇನ್ನೊಂದೆಡೆ ತನ್ನ ಪಾಪಗಳನ್ನು ಅವರ ಮೇಲೆ ಹಾಕುತ್ತಾರೆ. ಹೀಗೆ ಬಹುದೇವಾರಾಧನೆಯ ವಿಶ್ವಾಸ ಪಾಪದ ಮಾರ್ಗಗಳನ್ನು ತೆರೆಯುತ್ತದೆ. ಏಕೆಂದರೆ ಅವರು ಭಾವಿಸುವುದು ಯೇಸು ನಮ್ಮ ಪಾಪಗಳನ್ನು ವಹಿಸಿಕೊಂಡಿದ್ದಾನೆ ಎಂದು.

**(ತಫ್ಸೀರ್ ಕಬೀರ್ ಸಂಪುಟ 4, ಪುಟ 340 ಮುದ್ರಣ 2010 ಖಾದಿಯಾನ್)**

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ಸಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

MUSLIM TELEVISION AHMADIYYA INTERNATIONAL
www.mta.tv

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 19 October 2023, Issue No. 42

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-41ರ ಉಳಿದ ಭಾಗ ಮುಂದುವರಿಸಲಾಗಿದೆ)*

### ಖಿಲಾಫತ್ ಫ್ಲೈಟ್

ಒದಗಿಸಲ್ಪಟ್ಟ ಬೋರ್ಡಿಂಗ್ ಮೇಲೆ ಖಿಲಾಫತ್ ಫ್ಲೈಟ್ 2022 ಎಂದು ಬರೆಯಲಾಗಿತ್ತು. ಫ್ಲೈಟ್ ಸಂಖ್ಯೆ KF-2022 ಎಂದಿತ್ತು. ಬೋರ್ಡಿಂಗ್ ಕಾರ್ಡ್‌ನ ಒಂದು ಕಡೆ ಈ ಪದಗಳು ನಮುದಿತವಾಗಿದ್ದವು.

Ahmadiyya muslim Community
USA (100) 1920-2020
Centennial Khilafat Flight 2022
In the company of Hazrat Mirza
Masroor Ahmed Khalifatul masih 5 (atba)

ವಿಮಾನ ಹತ್ತುವ ಮೊದಲು, ಪ್ರವಾಸ ಮಾಡುವ ಎಲ್ಲಾ ಬಾಂಧವರು ವಿಮಾನದ ಮುಂದೆ ನಿಂತುಕೊಂಡಿದ್ದರು. ಹುಝೂರ್ ಅನ್ವರ್(ಅತಬಿಅ) ಆಗಮಿಸುತ್ತಿದ್ದಂತೆ ಬಾಂಧವರೆಲ್ಲರೂ ತಮ್ಮ ಪ್ರೀತಿಯ ನೇತಾರರ ಜೊತೆ ಸಾಮೂಹಿಕ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. MTA ಇವೆಲ್ಲ ದೃಷ್ಯಗಳ ಚಿತ್ರ ತಯಾರಿಸಿದ್ದರು.

12 ಗಂಟೆ 50 ನಿಮಿಷಕ್ಕೆ ಹುಝೂರ್ ಅನ್ವರ್(ಅತಬಿಅ) ವಿಮಾನ ಹತ್ತಿದರು. 12 ಗಂಟೆ 58 ಇಮಿಷಕ್ಕೆ ವಿವಾನ ಶಿಕಾಗೋವಿನ ಅಂತರರಾಷ್ಟ್ರೀಯ O'Hagre ವಿಮಾನ ನಿಲ್ದಾಣದಿಂದ ಡಲ್ಲಾಸ್‌ಗೆ ಪ್ರಯಾಣಿಸಿದರು. ಸುಮಾರು ಎರಡು ಗಂಟೆಗಳ ಪ್ರವಾಸದ ನಂತರ 2 ಗಂಟೆ 55 ನಿಮಿಷಕ್ಕೆ ಡಲ್ಲಾಸಿನ ಅಂತರಾಷ್ಟ್ರೀಯ Fort worth ವಿಮಾನ ನಿಲ್ದಾಣದ ಮೇಲೆ ಇಳಿಯಿತು. ಮತ್ತು ಇಳಿದು Taxi ಯಿಂದ Exit Gate ಗೆ ಬಂದು ನಿಂತರು. ಅಲ್ಲಿಂದ ಹೊರಗೆ ಹೋಗುವ ದೂರ ಅತ್ಯಂತ ಕಡಿಮೆ ಆಗಿತ್ತು. ಸಮೀಪವೇ ವಾಹನಗಳು ನಿಲ್ಲಿಸಿದ್ದರು.

ಹುಝೂರ್ ಅನ್ವರ್(ಅತಬಿಅ) ವಿಮಾನ ನಿಲ್ದಾಣದಿಂದ ಹೊರಗೆ ಆಗಮಿಸುತ್ತಲೇ ಸದರ್ ಜಮಾಅತ್ ಡಲ್ಲಾಸ್, ಖಾಲಿದ್ ರಹೀಮ್ ಶೇಖ್ ಸಾಹಿಬ್, ಮುಬಲ್ಲಿಗ್ ಡಲ್ಲಾಸ್ ಜ಼ಹೀರ್ ಅಹ್ಮದ್ ಖಾಜ ಸಾಹಿಬ್ ಮತ್ತು ಸದರ್ ಜಮಾಅತ್ Fort worth ಸಯೀದ್ ಚೌಧರಿ ಸಾಹಿಬ್ ಹುಝೂರ್ ಅನ್ವರ್(ಅತಬಿಅ)ಅವರಿಗೆ ಸ್ವಾಗತ ಕೋರಿದರು.

3 ಗಂಟೆ 10 ನಿಮಿಷಕ್ಕೆ ವಿಮಾನ ನಿಲ್ದಾಣದಿಂದ ಡಲ್ಲಾಸ್ ಜಮಾಅತಿನ ಕೇಂದ್ರ "ಮಸ್ಜಿದ್ ಬೈತುಲ್ ಇಕ್ರಮ್" ಕಡೆ ಪ್ರಯಾಣಿಸಿದರು. ಪೋಲೀಸ್ ವಹನಗಳು ಮತ್ತು ಇವರ ಹಲವು ಮೋಟಾರ್ ಸೈಕಲ್‌ಗಳ ತಂಡಗಳು Excort ಮಾಡಿದರು ಮತ್ತು ಜೊತೆ ಜೊತೆಯಲ್ಲೇ ರಸ್ತೆ clear ಗೊಳಿಸಿದರು ಸುಮಾರು 40 ನಿಮಿಷದ ಪ್ರಯಾಣದ ನಂತರ ಹುಝೂರ್ ಅನ್ವರ್(ಅತಬಿಅ) ಡಲ್ಲಾಸ್ ಜಮಾಅತಿನ ಕೇಂದ್ರಕ್ಕೆ ಆಗಮಿಸಿದರು.

### 2 ಅಕ್ಟೋಬರ್ 2022 (ರವಿವಾರ) ಶೇಷ ವರದಿ

### ಮಸ್ಜಿದ್ ಬೈತುಲ್-ಇಕ್ರಾಮ್‌ಗೆ ಆಗಮನ

ತಮ್ಮ ಪ್ರೀತಿಯ ನೇತಾರರನ್ನು ಸ್ವಾಗತಿಸಲು ಮತ್ತು ಹುಝೂರೆ ಅನ್ವರ್(ಅತಬಿಅ) ಅವರ ಶುಭ ದರ್ಶನ ಪಡೆಯಲು ಡಲ್ಲಾಸ್ ಜಮಾಅತಿನ ಬಾಂಧವರು ಮತ್ತು ಅಮೇರಿಕಾದ ವಿವಿಧ ಕ್ಷೇತ್ರಗಳಿಂದ ಬಂದ ಜಮಾಅತ್ನ ಬಾಂಧವರು ನೂರಾರು ಸಂಖ್ಯೆಯಲ್ಲಿ ಮುಂಜಾನೆಯಿಂದಲೇ "ಮಸ್ಜಿದ್ ಬೈತುಲ್ ಇಕ್ರಾಮ್" ಗೆ ಬರತೊಡಗಿದ್ದರು. ಪುರುಷ-ಸ್ತ್ರೀಯರ, ಮಕ್ಕಳ ವೃದ್ಧರ ಒಂದು ದೊಡ್ಡ ಸಂಖ್ಯೆಯಿತ್ತು, ಅದು ಸಾವಿರಕ್ಕಿಂತಲೂ ಹೆಚ್ಚಾಗಿತ್ತು. ತಮ್ಮ ನೇತಾರರನ್ನು ನೋಡಲು ಆತುರಪಡುತ್ತಿದ್ದರು.

ಡಲ್ಲಾಸ್ ಸ್ಥಳೀಯ ಜಮಾಅತಿನ ಹೊರತಾಗಿ ಈ ಕೆಳಗೆ ಕಾಣಿಸಿದ ವಿವಿಧ ಕ್ಷೇತ್ರಗಳಿಂದ ಬಾಂಧವರು ಆಗಮಿಸಿದ್ದರು.

Houston, Austin, Queens, Forth worth, Tulsa, MAry Land, San Jose, north Verginia, Sandiago, South Virginia, Bay point, Central Jersy, Chicago, Lehigh Valley, Richmind, North Jersy, Port Land, OshKosh, Buffalo, Brooklyn, Milwaki, charlotte, Boston, York, Kansas City, Detroit, Philadelphia, Long Island, Sacramento, Pittsburg, Albany, Albama, Cleveland, Baltimor, Miami, Hawai, Syracus, Phoenix, Tuscana, Georgia.

ಇನ್ನು ಕೆಲವು ಜಮಾಅತುಗಳಿಂದ ಜಮಾಅತ್‌ನ ಬಾಂಧವರು ದೀರ್ಘವಾದ ಪ್ರಯಾಣವನ್ನು ಬಳೆಸಿ ತಮ್ಮ ಪ್ರೀತಿಯ ನೇತಾರರನ್ನು ಸ್ವಾಗತಿಸಲು ಇಲ್ಲಿ ಆಗಮಿಸಿದ್ದರು. ಮೇರಿಲ್ಯೆಂಡಿನಿಂದ ಬರುವವರು 1367 ಮೈಲು, ಲಾಸ್ ಎಂಜಲಿಸ್‌ನಿಂದ ಬರುವವರು 1433 ಮೈಲು, Queens ನಿಂದ ಬರುವವರು 1578 ಮೈಲು ಮತ್ತು ಸ್ಯಾಟಲ್‌ನಿಂದ 2095 ಮೈಲು ದೀರ್ಘ ದಾರಿಯನ್ನು ಪ್ರಯಾಣಿಸಿ ತಮ್ಮ ಪ್ರೀತಿಯ ನೇತಾರರನ್ನು ನೋಡಲು ಮತ್ತು ಸ್ವಾಗತಿಸಲು ಡಲ್ಲಾಸ್ ತಲುಪಿದ್ದರು.

ಈ ಪುರುಷ ಸ್ತ್ರೀಯರಲ್ಲಿ ಒಂದು ದೊಡ್ಡ ಸಂಖ್ಯೆ ಹುಝೂರೆ ಅನ್ವರ್(ಅತಬಿಅ) ಅವರಿಗೆ ಮೊದಲನೇ ಬಾರಿಗೆ ನೋಡುವವರಾಗಿದ್ದರು. ದರ್ಶನ ಭಾಗ್ಯ ಪಡೆಯಲು ಒಂದೊಂದು ಕ್ಷಣಗಳನ್ನು ಸಹ ಕುತೂಹಲದಿಂದ ನಿರೀಕ್ಷಿಸುತ್ತಿದ್ದರು.

ಕೊನೆಗೆ ಆ ಶುಭ ಘಳಿಗೆ ಬಂದೇ ಬಿಟ್ಟಿತು. ಆಗ ಸರಿಯಾಗಿ 3:50 ಗಂಟೆ ಸಮಯಕ್ಕೆ ಅವರ ವಾಹನ ಮುಖ್ಯದ್ವಾರ ಪ್ರವೇಶಿಸಿತು.

ಹುಝೂರೆ ಅನ್ವರ್(ಅತಬಿಅ) ವಾಹನದಿಂದ ಕೆಳಗೆ ಇಳಿಯುತ್ತಲೇ ಡಲ್ಲಾಸ್ ಜಮಾಅತಿನ ಉಪಾಧ್ಯಕ್ಷರು ಶ್ರೀ ಖಾಲಿದ್ Kirk ಸಾಹಿಬ್ ಡಲ್ಲಾಸಿನ ಆಮಿಲ ಸದಸ್ಯರೊಂದಿಗೆ ಹುಝೂರೆ ಅನ್ವರ್(ಅತಬಿಅ) ಅವರಿಗೆ ಶುಭ ಕೋರಿದರು. ಇನ್ನೊಂದೆಡೆ ಜಮಾಅತ್ ಬಾಂಧವರು ನಿರಂತರವಾಗಿ ಘೋಷ ವಾಕ್ಯಗಳನ್ನು ಉಚ್ಚರಿಸುತ್ತಿದ್ದರು. ಎಲ್ಲಾ ಕಡೆಯಿಂದ ಅಸ್ಸಲಾಮು ಅಲೈಕುಂ ಹುಝೂರ್! "ಇನ್ನಿ ಮಅಕ ಯಾ ಮಸ್ರೂರ್" ಧ್ವನಿಗಳು ಮೊಳಗುತ್ತಿದ್ದವು. ಹುಝೂರೆ ಅನ್ವರ್(ಅತಬಿಅ) ತಮ್ಮ ಕೈಯನ್ನು ಬೀಸುತ್ತಾ ಎಲ್ಲರಿಗೂ ವಅಲೈಕುಂ ಅಸ್ಸಲಾಮ್ ಹೇಳಿದರು. ಎಲ್ಲೆಡೆಯಿಂದ ಜಮಾಅತ್ ಬಾಂಧವರು ಸಹ ಕೈ ಬೀಸುತ್ತಾ ತಮ್ಮ ಸಂತೋಷ ವ್ಯಕ್ತಪಡಿಸುತ್ತಿದ್ದರು. ಪ್ರತಿಯೊಬ್ಬರು ದರ್ಶನ ಭಾಗ್ಯದಿಂದ ಆನಂದಿತರಾಗುತ್ತಿದ್ದರು. ಬಹಳಷ್ಟು ಜನರ ಕಣ್ಣುಗಳು ತೇವಗೊಂಡಿದ್ದರು. ಸ್ತ್ರೀಯರು ಮತ್ತು ಹುಡುಗಿಯರು ದರ್ಶನ ಭಾಗ್ಯ ಪಡೆಯುವ ಜೊತೆಯಲ್ಲಿ ತಮ್ಮ ಕೈಗಳನ್ನು ಬೀಸುತ್ತಾ ತಮ್ಮ ಖಲೀಫರಿಗೆ ಶುಭಾಗಮನ ಹೇಳುತ್ತಿದ್ದರು.

ಹುಝೂರೆ ಅನ್ವರ್(ಅತಬಿಅ) ಅವರ ಡಲ್ಲಾಸ್‌ಗೆ ಇದು ಪ್ರಥಮ ಭೇಟಿಯಾಗಿತ್ತು. ಇಂದು ಡಲ್ಲಾಸ್ ಭೂಮಿಯು ಸಹ ಹಝ್ರತ್ ಅಮೀರುಲ್ ಮುಮಿನೀನರ ಪಾದಸ್ಪರ್ಷ ಭಾಗ್ಯ ಪಡೆದ ಭೂಮಿಗಳಲ್ಲಿ ಸೇರಿಯಾಗಿತ್ತು. ಈಗ ಅಲ್ಲಾಹನ ಅನುಗ್ರಹದಿಂದ ಇಲ್ಲಿಯೂ ಸಹ ಅಭಿವೃದ್ಧಿಯ ಹೊಸ ಮಾರ್ಗಗಳು ತೆರೆಯುವುವು. ಮತ್ತು ಇನ್‌ಶಾಅಲ್ಲಾಹ್ ಯಶಸ್ಸಿನ ಹಾಗೂ ಅಭಿವೃದ್ಧಿಯ ಹೊಸ ಯುಗದ ಪ್ರಾರಂಭವಾಗುವುದು.

ಹುಝೂರೆ ಅನ್ವರ್(ಅತಬಿಅ) ಅವರಿಗೆ ತಂಗಲು ಮಸ್ಜಿದ್ ಬೈತುಲ್ ಇಕ್ರಾಮಿನ ಹೊರಾಂಗಣದಲ್ಲಿರುವ ಅತಿಥಿ ಗೃಹದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಹುಝೂರೆ ಅನ್ವರ್(ಅತಬಿಅ) ಜಮಾಅತ್ ಬಾಂಧವರ ಸಾಗುತ್ತ ತಮ್ಮ ವಸತಿ ಜಾಗಕ್ಕೆ ತಲುಪಿದರು.

(ಮುಂದುವರಿಯುವುದು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.